ದ್ವಿದಶಮಾನೋತ್ಸವ ಗ್ರಂಥಮಾಲೆ

ಶಂಬಾ ಸಾಹಿತ್ಯದಲ್ಲಿ 'ಗ್ರಾಮದೇವತೆ'

ಡಾ॥ ನಿಂಗಣ್ಣ ಸಣ್ಣಕ್ಕಿ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ

[illegible]

ಡಾ|| ಎಸ್. ಆರ್. [illegible]

ಅವರಿಗೆ -

ಗೌರವ ಪೂರ್ವಕ.

[illegible]. [illegible]

೨೬-೪-೨೦೦೨.

ದ್ವಿಶತಮಾನೋತ್ಸವ ಗ್ರಂಥಮಾಲೆ ೪

ಶಂಬಾ ಸಾಹಿತ್ಯದಲ್ಲಿ ಗ್ರಾಮದೇವತೆ

ಡಾ॥ ನಿಂಗಣ್ಣ ಎನ್. ಸಣ್ಣಕ್ಕಿ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ

ಬಿ. ಎಂ. ಶ್ರೀ ಕಲಾಭವನ
ಬೆಂಗಳೂರು
೨೦೦೧

Shamba Sahithyadalli Gramadevathe *(Gramadevatha's in Literature of Sham. Ba. Joshi)* by Dr. Ninganna N. Sannakki, Neelakantha Nivasa, Basavanagara, Gokak-591307 Published by B. M. Sri Smaraka Prathishthana, B. M. Sri Kalabhavan, 4th Main, N. R. Colony, Bangalore-19, Karnataka, India, 2001. *Pages :* **24+8**

Price : **15-00**

ಬೆಲೆ : ಹದಿನೈದು ರೂಪಾಯಿಗಳು

ಮುದ್ರಣ :

ಪ್ರತಿಭಾ ಪ್ರಿಂಟರ್ಸ್

ನಂ. 373, 9ನೇ ಮುಖ್ಯರಸ್ತೆ (ಪೈಪ್ ಲೈನ್)

ಹನುಮಂತನಗರ, ಬೆಂಗಳೂರು - 560 019.

ಮುನ್ನುಡಿ

ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ ಸ್ಥಾಪನೆಯಾಗಿ ಇಪ್ಪತ್ತು ವರ್ಷವಾಗಿದೆ. ಈ ಅವಧಿಯಲ್ಲಿ ಪ್ರತಿಷ್ಠಾನ ಸಾಧಿಸಿರುವ ಸಾಧನೆ ಹೆಮ್ಮೆಪಡತಕ್ಕದ್ದು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರಿಂದ ಉದ್ಘಾಟನೆಯಾದ ಈ ಪ್ರತಿಷ್ಠಾನಕ್ಕೆ ಮಾಸ್ತಿಯವರು ಇರುವವರೆಗೂ ಪೋಷಕರಾಗಿದ್ದರು. ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾವ್ ಅವರು ಆರಂಭದಲ್ಲಿ ಅಧ್ಯಕ್ಷರಾಗಿದ್ದರು. ಈಗ ಗೌರವಾಧ್ಯಕ್ಷರಾಗಿ ಸಂಸ್ಥೆಗೆ ಮಾರ್ಗದರ್ಶನ ನೀಡುತ್ತಿದ್ದಾರೆ. ಈ ಸಂಸ್ಥೆಯ ಸಂಸ್ಥಾಪಕರಾದ ಸೀತಾರಾಮಯ್ಯನವರು ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ ಸಂಸ್ಥೆಯನ್ನು ಕಟ್ಟಿ-ಬೆಳಸಿ ಕನ್ನಡ ಜನತೆಗೆ ಬಿಟ್ಟು ಹೋಗಿದ್ದಾರೆ. ಅನಂತರ ಪ್ರೊ। ಎಲ್.ಎಸ್.ಶೇಷಗಿರಿರಾವ್ ಅವರು ಎರಡು ವರ್ಷಗಳವರೆಗೆ ಅಧ್ಯಕ್ಷರಾಗಿ ಸಂಸ್ಥೆಯನ್ನು ಮುನ್ನಡೆಸಿ ನನ್ನ ಮೇಲೆ ಅದರ ಭಾರವನ್ನು ಹೊರಿಸಿದ್ದಾರೆ. ಕಾರ್ಯದರ್ಶಿಗಳು, ಕಾರ್ಯಸಮಿತಿ ಸದಸ್ಯರು ಸಂಸ್ಥೆಯ ಬೆಳವಣಿಗೆಯಲ್ಲಿ ಸಹಕರಿಸುತ್ತ ನನ್ನ ಹೊಣೆಯನ್ನು ಸುಲಭ ಮಾಡುತ್ತಿದ್ದಾರೆ.

ಪ್ರತಿಷ್ಠಾನ ನಿಷ್ಠೆಯಿಂದ ಸಾಧಿಸಿರುವ ಪಾಂಡಿತ್ಯದ ಕೆಲಸಗಳು ಹಲವು. ಅವುಗಳಲ್ಲಿ ಪ್ರಮುಖವಾದದ್ದು ಮೌಲಿಕವಾದ ಪ್ರಕಟನೆಗಳು. ಈವರೆಗೆ ಪ್ರತಿಷ್ಠಾನ ಅರವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದೆ. 'ಮಣಿಹ', 'ಶ್ರೀನಿಧಿ', 'ಸಂಗಮರಕಾಲದ ವಿಜಯನಗರ', 'ಶ್ರೀಕೃಷ್ಣಬಾಲೀಲೆ' 'ಕುಮಾರವ್ಯಾಸ ಭಾರತ ಸಂಗ್ರಹ' ಮುಂತಾದ ಬೃಹತ್ ಕೃತಿಗಳ ಸಾಲಿನಲ್ಲಿ ಎಂ.ವಿ.ಸೀ. ಸಮಗ್ರ ಸಾಹಿತ್ಯ ಮಾಲೆಯ ಕೃತಿಗಳೂ ಸೇರುತ್ತಿವೆ. ಪ್ರತಿಷ್ಠಾನ ತನ್ನ ದಶಮಾನೋತ್ಸವ ಸ್ಮರಣೆಗಾಗಿ 'ದಶಮಾನೋತ್ಸವ ಕೃತಿ ಮಾಲೆ'ಯಲ್ಲಿ ಹತ್ತು ಉಪಯುಕ್ತ ಕೃತಿಗಳನ್ನು ಪ್ರಕಟಿಸಿದೆ. 'ಅಪ್ರಕಟಿತ ಹಸ್ತಪ್ರತಿಗಳ ಸಂಪಾದನೆ ಮತ್ತು ಪ್ರಕಟಣೆ', 'ಜನ್ಮಶತಾಬ್ದಿ ಸ್ಮೃತಿಮಾಲೆ', 'ದತ್ತಿ ಉಪನ್ಯಾಸ ಮಾಲೆ', 'ಸಹೃದಯ ಗೋಷ್ಠಿ ಕೃತಿ ಮಾಲೆ', 'ತಿಮ್ಮಪ್ಪದಾಸ ಪ್ರಕಾಶನ ಮಾಲೆ', 'ಎಂ.ವಿ.ಸೀ. ಸಮಗ್ರ ಸಾಹಿತ್ಯ ಮಾಲೆ', ಹೀಗೆ ಹಲವು ಮಾಲೆಗಳಲ್ಲಿ ವಿಮರ್ಶೆ, ವೈಚಾರಿಕ, ವಿದ್ವತ್ಪೂರ್ಣ ಹಾಗೂ ಪಾಂಡಿತ್ಯ ಗ್ರಂಥಗಳನ್ನಷ್ಟೆ ಪ್ರಕಟಿಸುತ್ತಿರುವ ಪ್ರತಿಷ್ಠಾನ ಈ ವರ್ಷ ತನ್ನ ದ್ವಿದಶಮಾನೋತ್ಸವ ಸ್ಮರಣೆಗಾಗಿ 'ದ್ವಿದಶಮಾನೋತ್ಸವ ಸ್ಮೃತಿ ಮಾಲೆ'ಯನ್ನು ಆರಂಭಿಸಿ ಈ ಮಾಲೆಯಲ್ಲಿ ೨೦ ಗ್ರಂಥಗಳನ್ನು ಪ್ರಕಟಿಸಲು ಯೋಜಿಸಿದೆ.

ಪ್ರಾಚೀನ ಹಸ್ತಪ್ರತಿಗಳ ಸಂಗ್ರಹಣ ಸಂರಕ್ಷಣ ಪ್ರತಿಷ್ಠಾನದ ಬಹುಮುಖ್ಯವಾದ ಕಾರ್ಯ. ನಿರಂತರವಾಗಿ ಈ ಕಾರ್ಯವನ್ನು ಪ್ರತಿಷ್ಠಾನ ನಡೆಸಿಕೊಂಡು ಬರುತ್ತಿದೆ. ಈವರೆಗೆ ಸುಮಾರು ಎರಡು ಸಾವಿರ ಹಸ್ತಪ್ರತಿಗಳನ್ನು ಸಂಗ್ರಹಿಸಿ ವೈಜ್ಞಾನಿಕವಾಗಿ ಸಂರಕ್ಷಿಸಿಕೊಂಡು ಬರಲಾಗುತ್ತಿದೆ. 'ಹಸ್ತಪ್ರತಿಶಾಸ್ತ್ರ ತರಗತಿ'ಯನ್ನು ೧೯೯೦ರಿಂದ ಪ್ರಾರಂಭಿಸಿದೆ. ಪ್ರಾಚೀನ ಹಸ್ತಪ್ರತಿಗಳನ್ನು

ಸಂಗ್ರಹಿಸುವುದರಿಂದ ಹಿಡಿದು ಅವುಗಳ ಸಂರಕ್ಷಣೆ, ಸೂಚಿ ತಯಾರಿಕೆ, ಪ್ರತಿ ಮಾಡುವುದು, ಓದುವುದು ಮತ್ತು ಗ್ರಂಥ ಸಂಪಾದನೆಯ ವರೆಗೆ ಈ ತರಗತಿಯಲ್ಲಿ ತರಬೇತಿಯನ್ನು ನೀಡಲಾಗುತ್ತಿದೆ.

ಕೆಲವು ವರ್ಷ ಪ್ರತಿಷ್ಠಾನ 'ಸಾಹಿತ್ಯೋಪಾಸಕರು' ಎಂಬ ಹೆಸರಿನ ವಿಶೇಷ ಕಾರ್ಯಕ್ರಮ ಮಾಲೆಯನ್ನು ನಡೆಸಿತು. ಇದು ಕಳೆದ ಶತಮಾನದಿಂದಲೂ ಹೊಸಗನ್ನಡ ಸಾಹಿತ್ಯಕ್ಕಾಗಿ ದುಡಿದ ಸಾಹಿತಿ ವಿದ್ವಾಂಸರನ್ನು, ಕನ್ನಡ ನಾಡು-ನುಡಿಯನ್ನು ಕಟ್ಟಿ ಬೆಳಸಿದ ಮಹನೀಯರನ್ನು ಈ ಪೀಳಿಗೆಯ ಜನರಿಗೆ ಪರಿಚಯಿಸುವ ವಿಶಿಷ್ಟ ಕಾರ್ಯಕ್ರಮ ಮಾಲೆಯಾಗಿತ್ತು. ಮೊದಲೆ ಹಲವು ಮಹನೀಯರ ಜನ್ಮಶತಾಬ್ದಿಗಳನ್ನು ನಡೆಸಿ ಸಾಂದರ್ಭಿಕವಾಗಿ ಈ ಕಾರ್ಯವನ್ನು ಮಾಡಿದ್ದ ಪ್ರತಿಷ್ಠಾನ ಇನ್ನು ಮುಂದೆ ಇದನ್ನು ಒಂದು ನಿರಂತರ ಕಾರ್ಯಕ್ರಮವನ್ನಾಗಿ ಈ 'ಸಾಹಿತ್ಯೋಪಾಸಕರು' ಮಾಲೆಯನ್ನು ಕೈಗೆತ್ತಿಕೊಂಡಿತ್ತು. ಈ ಕಾರ್ಯಕ್ರಮ ಮಾಲೆಯಲ್ಲಿ ಪ್ರತಿ ತಿಂಗಳೂ ಒಬ್ಬೊಬ್ಬ ಸಾಹಿತ್ಯೋಪಾಸಕರನ್ನು, ಅವರ ಸೇವೆ ಸಾಧನೆ ವ್ಯಕ್ತಿತ್ವಗಳನ್ನು ಪರಿಚಯಿಸುವ, ವಿಶ್ಲೇಷಿಸುವ, ವಿಮರ್ಶಿಸುವ ಉಪನ್ಯಾಸಗಳ ಮೂಲಕ ಸ್ಮರಿಸಲಾಗುತ್ತಿತ್ತು. ಅತ್ಯಂತ ಉಪಯುಕ್ತವಾದ ಜನಮನ್ನಣೆ ಪಡೆದಿದ್ದ ಈ ಕಾರ್ಯಕ್ರಮವನ್ನು ನಮ್ಮ ಆಸೆ ಫಲಿಸದೆ ಸರ್ಕಾರದ ಅನಿಯತ ಸಹಕಾರದಿಂದ ನಿರಂತರವಾಗಿ ನಡೆಸಲಾಗದೆ ಈಚೆಗೆ ಸ್ಥಗಿತಗೊಳಿಸಲಾಯಿತು. ವಿದ್ವಾಂಸ ಮಿತ್ರರು ಈ ಕಾರ್ಯಕ್ರಮಕ್ಕಾಗಿ ಬಹಳ ಕಷ್ಟಪಟ್ಟು ಸಂಗ್ರಹಿರುವ ಮಾಹಿತಿಗಳು, ಅಂಕಿ-ಅಂಶಗಳು ಮತ್ತು ನಡೆಸಿರುವ ಚಿಂತನೆಗಳು ಎಲ್ಲ ಕಾಲಕ್ಕೂ ಎಲ್ಲರಿಗೂ ದಕ್ಕುವಂತಾಗಬೇಕೆಂಬ ಉದ್ದೇಶದಿಂದ ಈ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿಯೂ ಪ್ರಕಟಿಸುವ ಸದುದ್ದೇಶವನ್ನು ಪ್ರತಿಷ್ಠಾನ ಹೊಂದಿತ್ತು. ಇಪ್ಪತ್ತು ಪುಸ್ತಕ ಪ್ರಕಟನೆಯ ಯೋಜನೆಯನ್ನು ಹಾಕಿಕೊಂಡಿರುವ "ದ್ವಿದಶಮಾನೋತ್ಸವ ಸ್ಮೃತಿ ಮಾಲೆ"ಯಲ್ಲಿ ಇವನ್ನು ಪ್ರಕಟಿಸಲು ತೀರ್ಮಾನಿಸಲಾಗಿದ್ದು ಈಗಾಗಲೆ ಒಂದೆರಡು ಪುಸ್ತಕಗಳನ್ನು ಹೊರತರಲಾಗಿದೆ.

ಪ್ರತಿಷ್ಠಾನದ ಇನ್ನೆರಡು ಮುಖ್ಯ ಕಾರ್ಯಗಳೆಂದರೆ : ಒಂದು 'ಕರ್ನಾಟಕ ಲೋಚನ' ಎಂಬ ವಿದ್ವತ್ ಪತ್ರಿಕೆಯ ಪ್ರಕಟನೆ. ಇನ್ನೊಂದು, ಸಹೃದಯ ಗೋಷ್ಠಿ. ಕರ್ನಾಟಕ ಲೋಚನ ಈಗಾಗಲೆ ಹದಿನೈದು ವರ್ಷಗಳನ್ನು ಪೂರೈಸಿದೆ. ಸದ್ಯಕ್ಕೆ ನಿಯತವಾಗಿ ಪ್ರಕಟವಾಗುತ್ತಿರುವ ಏಕೈಕ ಸಂಶೋಧನ ಪತ್ರಿಕೆ ಎಂಬ ಹೆಗ್ಗಳಿಕೆ ಇದಕ್ಕಿದೆ. ಹೊಸ ಹೊಸ ಸಂಶೋಧನೆಗಳು, ವಿದ್ವಾಂಸರ ಮೌಲಿಕ ವಿಚಾರಗಳು, ಟೀಕೆ ಟಿಪ್ಪಣಿಗಳು, ವಿಚಾರ ಪೂರ್ಣ ಮತ್ತು ವಿದ್ವತ್ತಿನ ಗ್ರಂಥಗಳ ವಿಮರ್ಶೆ ಹೀಗೆ ವಿದ್ವತ್ ಕ್ಷೇತ್ರಕ್ಕೇ ಈ ಪತ್ರಿಕೆ ಮೀಸಲಾಗಿದ್ದು ಪಂಡಿತಲೋಕದ ಮೆಚ್ಚುಗೆಗೆ ಪಾತ್ರವಾಗಿದೆ. 'ಸಹೃದಯಗೋಷ್ಠಿ' ತಿಂಗಳ ಉಪನ್ಯಾಸ ಮಾಲೆ, ಪ್ರತಿಷ್ಠಾನದ ಆರಂಭದಿಂದಲೂ ನಿರಂತರವಾಗಿ ನಡೆದುಕೊಂಡು ಬರುತ್ತಿದ್ದ ಯೋಜನೆ. ಪ್ರತಿಷ್ಠಾನದ ಬಹುಪಾಲು ಕೆಲಸಗಳು ವಿದ್ವತ್ ಕ್ಷೇತ್ರಕ್ಕೆ ಮೀಸಲಾಗಿದ್ದರೂ ಈ ಗೋಷ್ಠಿಯ ಮೂಲಕ ಸೃಜನ ಸಾಹಿತ್ಯಕ್ಕೂ ವೇದಿಕೆಯನ್ನು ಒದಗಿಸಿದೆ. ಹೊಸ ಹೊಸ ಕವಿಗಳು, ಲೇಖಕರು ತಮ್ಮ ಹೊಸ ಕವಿತೆ, ಕೃತಿ ಲೇಖನಗಳನ್ನೂ ಇಲ್ಲಿ ಓದಿ ಸಭಿಕರ-ಸಹೃದಯರ ಚರ್ಚೆಯಲ್ಲಿ ಬೆಳಕಿಗೆ ಬರುತ್ತಿದ್ದಾರೆ. ಇದರೊಂದಿಗೇ ಈ ಗೋಷ್ಠಿಯ ಮೂಲಕ 'ಮಾಸ್ತಿ ಸ್ಮರಣೆ', 'ಎಂ.ವಿ.ಸೀ. ಸಂಸ್ಮರಣೆ',

'ಗೋಕಾಕ್ ತಿಂಗಳ ನೆನಪು'ಗಳಂತಹ ಯೋಜನೆಗಳನ್ನು ಹಮ್ಮಿಕೊಂಡು ಪುಸ್ತಕ ರೂಪದಲ್ಲೂ ಪ್ರಕಟಿಸಲಾಗುತ್ತಿದೆ. ಆದರೆ ಸೀತಾರಾಮಯ್ಯನವರ ಮನೆಯಿಂದ ಮಾಸ್ತಿ ಮನೆಗೆ ಪ್ರತಿಷ್ಠಾನ ಸ್ಥಳಾಂತರಗೊಂಡ ಮೇಲೆ (೧೦-೨-೯೬) ಸ್ಥಳಾಭಾವದ ಕಾರಣದಿಂದ ಸಹೃದಯ ಗೋಷ್ಠಿಯನ್ನು ನಡೆಸಲಾಗಿಲ್ಲ. ಈಚೆಗೆ (೩-೨-೨೦೦೦) ಪ್ರತಿಷ್ಠಾನ ಸ್ವಂತ ಕಟ್ಟಡಕ್ಕೆ ಬಂದಿದ್ದು ಇನ್ನು ಮುಂದೆ ಈ ವೇದಿಕೆ ಪುನರಾರಂಭಗೊಳ್ಳುತ್ತದೆ.

ಬಿ.ಎಂ.ಶ್ರೀಯವರ ಹುಟ್ಟೂರಾದ ಬೆಳ್ಳೂರಿನಲ್ಲಿ ೧೯೮೪ರಲ್ಲಿ ನಡೆಸಿದ ಬಿ.ಎಂ.ಶ್ರೀ ಜನ್ಮಶತಾಬ್ದಿಯ ಸ್ಮರಣೆಗಾಗಿ ಶ್ರೀಯವರ ಮನೆಯಿದ್ದ ಸ್ಥಳದಲ್ಲಿ ನಿರ್ಮಿಸಿರುವ ಎರಡು ಮಹಡಿಗಳ 'ಆಚಾರ್ಯ ಬಿ.ಎಂ.ಶ್ರೀ ಶತಮಾನೋತ್ಸವ ಭವನ' ೧೯೯೫ರಿಂದಲೂ ನಾಡಿಗೆ ಸಮರ್ಪಣೆಯಾಗಿದ್ದು ಪ್ರತಿಷ್ಠಾನ ಅಲ್ಲಿ ಸ್ಥಳೀಯ ಸಮಿತಿಯ ಸಹಕಾರದಿಂದ ಅಲ್ಲಿರುವ ಬಿ.ಎಂ.ಶ್ರೀ ಸಭಾಂಗಣದಲ್ಲಿ ಪ್ರತಿ ತಿಂಗಳೂ ಒಂದೊಂದು ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. 'ಬಿ.ಎಂ.ಶ್ರೀ ಸ್ಥಿರವಸ್ತು ಪ್ರದರ್ಶನ' ಮತ್ತು 'ಶ್ರೀ ಶತಮಾನ ಗ್ರಂಥಾಲಯ'ಗಳನ್ನೂ ನಿರ್ವಹಿಸುತ್ತಿದೆ.

ಇವೆಲ್ಲಕ್ಕಿಂತ ಮುಖ್ಯವಾದ ಪ್ರಸ್ತುತ ಯೋಜನೆಯೆಂದರೆ ರಾಜಧಾನಿಯಲ್ಲಿ 'ಬಿ.ಎಂ.ಶ್ರೀ ಕಲಾಭವನ' ನಿರ್ಮಾಣ. ನಾಲ್ಕು ಮಹಡಿಗಳ ಸು.೩೫ ಲಕ್ಷ ರೂಗಳ ಈ ಯೋಜನೆ ಸಮಸ್ತ ಕನ್ನಡಿಗರ ಸಹಕಾರದಿಂದಲೇ ಪೂರ್ಣಗೊಳ್ಳಬೇಕು. ಇದನ್ನು ಕರ್ನಾಟಕದಲ್ಲಿ ಆಚಾರ್ಯಪುರುಷರೂ ಹೊಸಗನ್ನಡ ಯುಗ ಪ್ರವರ್ತಕರೂ ಆಗಿರುವ ಬಿ.ಎಂ.ಶ್ರೀಕಂಠಯ್ಯನವರ ಮಾದರಿ ಕವಿಸ್ಮಾರಕ ಮಾಡುವುದು ನಮ್ಮ ಕನಸು. ಸಂಸ್ಥಾಪಕ ಸೀತಾರಾಮಯ್ಯನವರ ಕನಸಿನ ಈ ಕೂಸನ್ನು ಇದೀಗ ನೆಲಮಹಡಿ ನಿರ್ಮಾಣದ ಮೂಲಕ ಕೈಗೆತ್ತಿಕೊಂಡಿದ್ದೇವೆ. ಮೊದಲ ಮಹಡಿ ನಿರ್ಮಾಣ ಕಾರ್ಯ ಶ್ರೀ ಅನಂತಕುಮಾರ್ ಮತ್ತು ಶ್ರೀ ರಾಮಕೃಷ್ಣ ಹೆಗಡೆಯವರ ಸಂಸದರ ನಿಧಿಯ ಸಹಕಾರದಿಂದ ಪ್ರಾರಂಭವಾಗುತ್ತಿದೆ. ಎಲ್ಲ ಕನ್ನಡಿಗರೂ ಉದಾರ ಕೊಡುಗೆ ನೀಡಿ ಈ ಯೋಜನೆಯನ್ನು ಪೂರ್ಣಗೊಳಿಸಲು ಪ್ರಾರ್ಥಿಸುತ್ತೇವೆ.

ಪ್ರಸ್ತುತ ಗ್ರಂಥ ಪ್ರತಿಷ್ಠಾನದಲ್ಲಿರುವ ಶಂಬಾ ದತ್ತಿ ನಿಧಿಯಿಂದ ಕಳೆದ ವರ್ಷ ನಡೆದ ಉಪನ್ಯಾಸದ ಪುಸ್ತಕ ರೂಪ. ಡಾ॥ ನಿಂಗಣ್ಣ ಸಣ್ಣಕ್ಕಿಯವರು ಡಾ॥ ಶಂಬಾ ಅವರ ಸಮಗ್ರ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿರುವ ಸಂಸ್ಕೃತಿ ಚಿಂತಕರು. ಇಲ್ಲಿ ಶಂಬಾ ಅವರ ಸಾಹಿತ್ಯದಲ್ಲಿ ಕಂಡು ಬಂದಿರುವ ಗ್ರಾಮದೇವತೆಗಳ ಬಗೆಗಿನ ಚಿಂತನೆಯನ್ನು ಸಾಂಸ್ಕೃತಿಕವಾಗಿ ಶಂಬಾ ಅವರ ಚಿಂತನೆಯ ಜಾಡು ಹಿಡಿದು ನಡೆಸಿದ್ದಾರೆ. ಇದು ವಿದ್ವಜ್ಜನರಿಗೆ ಮೆಚ್ಚುಗೆಯಾಗುತ್ತದೆಂದು ಭಾವಿಸಿದ್ದೇವೆ.

ಈ ಪುಸ್ತಕವನ್ನು ಸಿದ್ಧಪಡಿಸಲು ನೆರವಾದ ಲೋಚನ ಸಂಪಾದಕರುಗಳಿಗೂ, ಅಂದವಾಗಿ ಮುದ್ರಿಸಿಕೊಟ್ಟ ಪ್ರತಿಭ ಪ್ರಿಂಟರ್ಸ್‌ನವರಿಗೂ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

೧೨-೩-೨೦೦೧

ಎನ್. ಬಸವಾರಾಧ್ಯ
ಅಧ್ಯಕ್ಷ

ಪರಿವಿಡಿ

ಶಂಬಾ ಸಾಹಿತ್ಯದಲ್ಲಿ ಗ್ರಾಮದೇವತೆ

ಶಂಬಾ ಜೋಶಿಯವರ ಸಾಹಿತ್ಯದಲ್ಲಿ ಗ್ರಾಮದೇವತೆಗಳ ಚಿಂತನೆ

ಡಾ॥ ನಿಂಗಣ್ಣಾ ಸಣ್ಣಕ್ಕಿ

ಕರ್ನಾಟಕದಲ್ಲಿ

ಇಪ್ಪತ್ತನೆಯ ಶತಮಾನವು ಅನೇಕ ಕನ್ನಡ ಸಾಹಿತ್ಯದ ದಿಗ್ಗಜರನ್ನು ಕಂಡಿದೆ. ಈ ಶತಮಾನದ ಕನ್ನಡ ಸಾಹಿತ್ಯವು ಮಹತ್ವದ ಸಾಹಿತ್ಯ ಚರಿತ್ರೆಯಾಗುವಷ್ಟು ಕಾರ್ಯ ಸಾಗಿಹೋಗಿದೆ. ನಾವೀಗ ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಅವಲೋಕನ ಮಾಡುವುದು ಅವಶ್ಯವಿದೆ. ಈ ಬಗೆಗೆ ಅಲ್ಲಿಲ್ಲಿ ಕಾರ್ಯಗಳು ನಡೆದಿರುವುದನ್ನು ಕನ್ನಡ, ಇಂಗ್ಲಿಷ್ ಪತ್ರಿಕೆಗಳು ಸೂಚನೆ ನೀಡಿವೆ.

ಕನ್ನಡ ಸಾಹಿತ್ಯ- ಸಂಸ್ಕೃತಿಯ ಸಂಶೋಧನೆಯಲ್ಲಿಯೇ ಇಡೀ ಜೀವಮಾನವನ್ನು ಚಿಂತನೆಯೊಂದಿಗೆ ಬಾಳಿ-ಬದುಕಿದವರು ಡಾ. ಶಂಕರ ಬಾಳದೀಕ್ಷಿತ ಜೋಶಿ. ಇವರು ಸಂಸ್ಕೃತವನ್ನು ಅಧ್ಯಯನ ಮಾಡಿ ಋಗ್ವೇದದ ತಿರುಳನ್ನು ತಿಳಿಸಿದ ಮಹನೀಯರು. ನಿನ್ನೆ-ಇಂದು-ನಾಳೆಗಳ ಅಂದರೆ ಸಾರ್ವಕಾಲಿಕ ಸತ್ಯವನ್ನು ತಮ್ಮ ಬರಹಗಳ ಹಾಗೂ ಸಾಹಿತ್ಯ ಕೃತಿಗಳ ಮೂಲಕ ತಿಳಿಯಪಡಿಸಿದ್ದಾರೆ. ತಮ್ಮ ಸಂಶೋಧನ ಕೃತಿಗಳ ಮೂಲಕವಾಗಿ ಶಂಬಾ ಅವರು 1960 ರಲ್ಲಿಯೇ ವಿದ್ವಜ್ಜನರ ಗಮನ ಸೆಳೆದರು. 'ಹಾಲುಮತ ದರ್ಶನ' ಕಂನಾಡಿನ ಸಂಶೋಧಕರ ಕಣ್ಣು ತೆರೆಯಿಸಿತು. ಶಂಬಾ ಅವರ ಬದುಕು-ಬರಹ ಕಂಡು ಅವರೊಬ್ಬ ಸಂಶೋಧಕ ವಿಚಾರವಾದಿ, ಮಾನವತಾವಾದಿ ಮುಂತಾದ ಸತ್ಯ ಸಂಗತಿಗಳು ಕರ್ನಾಟಕದ ಜನತೆಯ ಗಮನ ಸೆಳೆದವು. ಹೀಗಾಗಿ ಶಂಬಾ ಜೋಶಿ ಅವರು ಕನ್ನಡ ಸಾಹಿತ್ಯದ ದಿಗ್ಗಜರಾಗಿ ಎಡೆಪಡೆದರು. 'ಸಮನ್ವಯವು ಇವರ ಸಾಮಾಜಿಕ ಪ್ರಜ್ಞೆಯ ದೃಷ್ಟಿಯಾದರೆ, ಅದರ ಹಿಂದಿನ ಶಕ್ತಿಯು ವಿಚಾರವಾದದ್ದು. ವಿಚಾರ ಕ್ರಾಂತಿಯ ಅಗತ್ಯ ಮಹತ್ವಗಳನ್ನು ಇವರಷ್ಟು ನಿಸ್ಸಂದಿಗ್ಧವಾಗಿ ನಿರಪೇಕ್ಷವಾಗಿ ಆಧುನಿಕ ಕನ್ನಡ ಸಾಹಿತ್ತಿಕರಲ್ಲಿ ಮತ್ತೆ ಮತ್ತೆ ಪ್ರತಿಪಾದಿಸಿದವರು ಶ್ರೀ ಶಿವರಾಮ ಕಾರಂತರಂಥ ಒಬ್ಬಿಬ್ಬರನ್ನು ಬಿಟ್ಟರೆ ಇನ್ನಾರು ಹೆಚ್ಚು ಕಣ್ಣು ತುಂಬುವುದಿಲ್ಲ.'[1]

ಶಂಬಾ ಜೋಶಿಯವರು ಹತ್ತಿರ ಹತ್ತಿರ ನಲ್ವತ್ತು ಸಾಹಿತ್ಯ ಕೃತಿಗಳನ್ನು ರಚಿಸಿ ನಮ್ಮ ಮುಂದೆ ಪ್ರಾಜ್ಞರಾಗಿ ಇಟ್ಟಿದ್ದಾರೆ.

ಡಾ. ಶಂಬಾ ಜೋಶಿ ಅವರು ತಮ್ಮ ಸಂಶೋಧನೆಗೆ ಬೇಕಾಗಿರುವ ಹಲವಾರು ಆಕರಗಳನ್ನು ಸತ್ಯದ ಅರಿವಿನಿಂದ ಸ್ವೀಕರಿಸಿದ್ದಾರೆ. ಕಂನುಡಿ, ಕಂನಾಡು ಅದೇ ಕರ್ನಾಟ, ಒಟ್ಟಾರೆ ಕನ್ನಡ ಸಂಸ್ಕೃತಿ, ಭಾರತೀಯ ಸಂಸ್ಕೃತಿ ಮತ್ತು ಮಾನವ ಸಂಸ್ಕೃತಿ ಎಂಬ

---

[1] ಪ್ರಜ್ಞಾ ನೇತ್ರದ ಬೆಳಕಿನಲ್ಲಿ-ಲೇ: ಗೌರೀಶ ಕಾಯ್ಕಿಣಿ. ಕಾಲಗತಿ ಪ್ರಕಾಶನ, ರಾಯಬಾಗ, ಪುಟ-14, ಪ್ರಥಮ ಮುದ್ರಣ: 1982.

ಪ್ರಮುಖ ವಿಶ್ವ ಪರಿಧಿಯಲ್ಲಿ ತಮ್ಮ ಕೆಲಸವನ್ನು ಮಾಡಿದ್ದಾರೆ. 1979ರಲ್ಲಿ 'ವೈವಸ್ವತ ಮನು ಪ್ರಣೀತ ಮಾನವ ಧರ್ಮದ ಆಕೃತಿ' ಗ್ರಂಥವನ್ನು ರಚಿಸಿದರು. ಅವರ ಓರೆಕೋರೆ ಅಕ್ಷರಗಳನ್ನು ನಾನು ದುಂಡಾಗಿ ಬರೆದು ಮುದ್ರಣಕ್ಕೆ ನೀಡಿದ್ದೇನೆ. ಆ ಅವಧಿಯಲ್ಲಿ ಹಲವಾರು ಪ್ರಶ್ನೆಗಳನ್ನು ನೀಡಿ, ಅವರಿಂದ ನನ್ನ ಸಂಶಯಗಳನ್ನು ನಿವಾರಿಸಿಕೊಂಡಿದ್ದೇನೆ.

1) ಕರ್ನಾಟಕ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯ ಅಂಗವಾಗಿದೆ. 2) ದೇವರು ಭಕ್ತರನ್ನು ರೂಪಿಸಿದನು ಎಂಬ ಮಾತಿಗಿಂತ ಭಕ್ತರು ತಮ್ಮ ದೇವರನ್ನು ರೂಪಿಸಿದ್ದಾರೆ ಎಂದರೂ ತಪ್ಪಲ್ಲ. (ಪು-19) 3) 'ಭಾರತೀಯರ ಸಂಸ್ಕೃತಿ ಅವರ ದೇವಾಲಯಗಳಲ್ಲಿದೆ. ಈ ಪ್ರಮುಖ ಸಂಗತಿಗಳಿಂದ ಶಂಬಾ ಅವರು ಗ್ರಾಮ ದೇವತೆಗಳ ಬಗೆಗೆ ಮಾಡಿದ ಚಿಂತನೆಗಳನ್ನು ತಿಳಿಯುವುದು ಅವಶ್ಯ ಎನಿಸಿದೆ.

ಶಂಬಾ ಅವರ ದೃಷ್ಟಿಯಲ್ಲಿ ಅರಿವು ಅಂದರೆ ಪ್ರಜ್ಞೆ ಮಾನವರಲ್ಲಿ ಎಲ್ಲಿ ಹೇಗೆ ಬಂದಿದೆ. ವಾನರ, ನರ ಮತ್ತು ಮಾನವ ಹಂತಗಳನ್ನು ಗುರುತಿಸಿ, ದೇವರ ಬಗೆಗೆ ತಮ್ಮ ಚಿಂತನೆಗಳನ್ನು ಅಲ್ಲಲ್ಲಿ ನೀಡಿದ್ದಾರೆ.

ಪ್ರಮುಖವಾಗಿ ಅವರ ಇಡೀ ಬರಹಗಳನ್ನು ನಿರೀಕ್ಷಿಸಿದಾಗ ವೈದಿಕ ದೇವತೆಗಳು ಮತ್ತು ಅವೈದಿಕ ದೇವತೆಗಳು ಎಂಬ ಕಲ್ಪನೆ ಮೂಡಿ ನಿಲ್ಲುತ್ತದೆ.

ಮತ್ತೊಂದು ಬಗೆಯಲ್ಲಿ ಶಿಷ್ಟ ದೇವತೆಗಳು ಮತ್ತು ಜನಪದ ದೇವತೆಗಳು ಎಂಬ ವರ್ಗೀಕರಣವೂ ತಿಳಿದು ಬರುತ್ತದೆ. ಆರ್ಯ-ದ್ರಾವಿಡರ ಸಮ್ಮಿಳನದಿಂದಾಗಿ ಮೇಲನೋಟಕ್ಕೆ ಒಂದು ಬಗೆಯಾಗಿ ಹೊಳೆದು, ಒಳನೋಟಕ್ಕೆ ಇನ್ನೊಂದು ಬಗೆಯಾಗಿರುತ್ತದೆ. ಹೀಗಾಗಿ ದ್ರಾವಿಡ ದೇವತೆಗಳು ಮತ್ತು ಆರ್ಯರ ದೇವತೆಗಳು ಇಲ್ಲವೆ ಆರ್ಯರ ದೇವತೆಗಳು ಆರ್ಯೇತರ ದೇವತೆಗಳು ಎಂಬುದನ್ನು ತಿಳಿಯಬೇಕಾಗುತ್ತದೆ.

ಇನ್ನು ಕೆಲವು ಸಂಶೋಧಕರ ದೃಷ್ಟಿಯಿಂದ ಗುಣ ಸ್ವಭಾವದ ಪ್ರಕಾರ ಸೌಮ್ಯ ದೇವತೆಗಳು ಮತ್ತು ಉಗ್ರ ದೇವತೆಗಳು, ಆಹಾರ (ನೈವೇದ್ಯದ ಪ್ರಕಾರ) ಮಾಂಸಾಹಾರಿ ಮತ್ತು ಸಸ್ಯಾಹಾರಿ ದೇವತೆಗಳೆಂದೂ ವಿಭಾಗಿಸಿಯೂ, ಪೂಜಾ- ಆಚರಣೆಗಳ ಬಗೆಯಲ್ಲೂ ಅಧ್ಯಯನವನ್ನು ಮಾಡಬಹುದು. ಶಂಬಾ ಅವರ ಅಧ್ಯಯನ ದೃಷ್ಟಿಯಲ್ಲಿ ಲಿಂಗಗಳ ಪ್ರಕಾರವಾಗಿಯೂ ಗಂಡು ದೇವತೆಗಳು, ಹೆಣ್ಣು ದೇವತೆಗಳು ಎಂಬುದಾಗಿಯೂ ತಿಳಿಯುವಂತಹ ಸಂಗತಿಗಳುಂಟು. ಇಡಿಯಾಗಿ ಅವರ ವಿಚಾರಗಳು ಈ ಪ್ರಬಂಧದಲ್ಲಿ ಮೂಡಿರದಿದ್ದರೂ ಹಲವಾರು ವಿಚಾರಗಳನ್ನು ಇಲ್ಲಿ ಗ್ರಾಮ ದೇವತೆಗಳ ಬಗೆಗೆ ತಿಳಿಯೋಣ.

ಶಂಬಾ ಅವರು 'ದೇವಾನುದೇವತೆಗಳು' ಒಂಬ ವಿಷಯವಾಗಿ ಹಾಲು ಮತ ದರ್ಶನ, ಕರ್ನಾಟಕ ಸಂಸ್ಕೃತಿ ಪೂರ್ವ ಪೀಠಿಕೆ ಭಾಗ-1 ಮತ್ತು 2, ನಾಗ ಪ್ರತಿಮಾ, ಋಗ್ವೇದ ಸಾರ, ಮರ್ಹಾಟೀ ಸಂಸ್ಕೃತಿ ಕೆಲವು ಸಮಸ್ಯೆಗಳು (ಮರಾಠಿ ಸಂಸ್ಕೃತಿ ಕಾಂಹಿ ಸಮಸ್ಯಾ) ಶಿವ ರಹಸ್ಯ, ಬುಧನ ಜಾತಕ, ವೈವಸ್ವತ ಮನು ಪ್ರಣೀತ ಮಾನವ ಧರ್ಮದ ಆಕೃತಿ' ಇತ್ಯಾದಿ ಸಾಹಿತ್ಯಕ-ಸಂಶೋಧನಾತ್ಮಕ ಕೃತಿಗಳಲ್ಲಿ ಚಿಂತನಗೈದಿರುವರು.

(1) ಶಿವ-ರುದ್ರ ಅಥವಾ ರುದ್ರ-ಶಿವ ದೇವತೆಗಳು

ಕರ್ನಾಟಕದಲ್ಲಿ ಮತ್ತು ಮಹಾರಾಷ್ಟ್ರದಲ್ಲಿ ಶಿವದೇವಾಲಯಗಳು ಶಿವನ ಹೆಸರಿನ ಗ್ರಾಮಗಳು ಬಹುಸಂಖ್ಯಾಕರವಾಗಿವೆ. ಮಹಾರಾಷ್ಟ್ರದಲ್ಲಿ ಶಿವಾಜಿಯು ಜನಿಸಿದ ಊರಿನ ಹೆಸರೇ ಶಿವನೇರಿ (ಶಿವನ+ಏರಿ) ಕನ್ನಡ ಪದವಾಗಿರುವುದನ್ನು ಗಮನಿಸಬಹುದಾಗಿದೆ. ಈಗ ಇಲ್ಲಿ ಶಿವನ ದೇವಾಲಯ ಹಾಗೂ ಶಿವಾಜಿ ದೇವಾಲಯಗಳು ಶೋಭಿಸುತ್ತಿವೆ. ಶಿವನ ಏರಿ ಕಂನಾಡಿನ ಭಾಗವಿರಲು ಶಕ್ಯವಿದೆ.

ರುದ್ರ ಎಂಬ ಶಬ್ದವು ದೊರಕುವುದು ಋಗ್ವೇದದಲ್ಲಿ 'ರುದ್ರನಿಗೆ' 'ಶಿವ' ಎಂದು ವಿಶೇಷಣವನ್ನು ವೈದಿಕ ಋಷಿಗಳು ಉಪಯೋಗಿಸುತ್ತಿದ್ದು ಅದು ಎಷ್ಟೊಂದು ಉಚಿತಾರ್ಥ ಉಳ್ಳುವುದೆಂಬುದು ಈಗ ಗೊತ್ತಾಗುವುದು! ಆದುದರಿಂದ ರುದ್ರ ಮತ್ತು ಶಿವ ಎಂದರೆ ಬೇರೆ ಅಲ್ಲ; ರುದ್ರ ಎಂದರೆ ಶಿವ, ಶಿವ ಎಂದರೆ ರುದ್ರ.[2] ಈ ಸ್ಪಷ್ಟೀಕರಣವನ್ನು ಹಲವು ರೀತಿಯಿಂದ ಶಂಬಾ ಅವರು ನೀಡುತ್ತಾರೆ. ಆರ್ಯರ ದೇವತೆ ರುದ್ರ. ದ್ರಾವಿಡರ ದೇವತೆ ಶಿವ. ಆದರೆ ರುದ್ರ ಶಿವ ಈ ಜೋಡು ನುಡಿಯು 'ಕೂಡಲ ಸಂಗಮದಂತೆ ಆಗಿದೆ. 'ಎರಡು ಭಿನ್ನ ಭಾಷೆಯ ಜನಾಂಗಗಳ ದೃಢವಾದ ಸಂಬಂಧ ಸಂಪರ್ಕಗಳು ಉಂಟಾದಾಗ ತಲೆದೋರುವುದುಂಟು. ಥಪ್ಪನ್ನೈವತ್ತಾರು, ಕಾಗದ-ಪತ್ರ ನಡುಮಧ್ಯೆ ಎಂಬಿವೇ ಮೊದಲಾದ ಮಾತುಗಳಲ್ಲಿ ಇದನ್ನು ನೋಡಿಕೊಳ್ಳಬಹುದು. ಆದುದರಿಂದ ರುದ್ರ-ಶಿವರು ಆರ್ಯ-ದ್ರಾವಿಡ ದೇವತೆ ಎಂಬುದು ನಿಶ್ಚಿತ. ರುದ್ರನು ಬೇರೆ ಶಿವನು ಬೇರೆಯಾಗಿರದೆ ಒಂದೇ ದೇವತೆಗೆ ಇರುವ ಭಿನ್ನ ಭಾಷೆಯೊಳಗಿನ ಎರಡು ಶಬ್ದಗಳು ಇವು.[3]

ಶಿವ ದೇವಾಲಯಗಳಿರುವ ಊರುಗಳಲ್ಲಿ ಆಚರಣೆಗಳನ್ನು ನಿರೀಕ್ಷಿಸಿದರೆ, ಶಿವನ ಪೂಜೆ, ನಡೆಯಿಸುವ ಜನಾಂಗ, ಮಾಡುವ ಭಕ್ತಿ, ನೀಡುವ ನೈವೇದ್ಯ ಇವೆಲ್ಲವುಗಳು ವಿಶೇಷವಾಗಿ ಹಾಲು ಮತದವರಿಂದ ನಡೆದುಕೊಂಡು ಬಂದುದಾಗಿದೆ. ಹಾಲುಮತದವರಿಗೆ 'ಕಳವರು' ಎಂದು ಕರೆಯಲಾಗುತ್ತಿದೆ. 'ಕಳವರ ರೀತಿ ನೀತಿಗಳು, ಅವರ ಕುಲದ ಕಥೆ ಪರಂಪರೆಗಳು ಇವನ್ನೆಲ್ಲ ನಿರೀಕ್ಷಿಸಿದರೆ, ಈ ಜನಾಂಗವು ಅತೀ ಪುರಾತನ ಕಾಲದ್ದೆಂದು ಕಂಡು ಬರುತ್ತದೆ. ಮೂಲ ದ್ರಾವಿಡರೆಲ್ಲ ಕಳವರ ಕುಲದವರು ಎಂದರೆ ಹಾಲುಮತದವರೇ. ಆದರೆ ಅನೇಕ ಕಾರಣಾಂತರಗಳಿಂದ ಅವರಲ್ಲಿ ಹಲವು ಬಗೆಗಳಾಗಲಾರಂಭಿಸಿದವು. ಕಳ್ಳನು ಉಳ್ಳವನಾಗುತ್ತಲೇ ಮರವನಾಗುತ್ತಾನೆ' ಎಂಬರ್ಥದ ಗಾದೆಯ ಮಾತು ತಮಿಳಿನಲ್ಲಿದೆ.[4]

---

[2] ಶಿವ ರಹಸ್ಯ-ಶಂ.ಬಾ ಜೋಶಿ, ಪುಟ-10, ಮಾಧವ ಬಲ್ಲಾಳ ಬಂಧುಗಳು, ಧಾರವಾಡ-1946.

[3] ಅದೇ-ಪು-11.

[4] ಶಂ.ಬಾ. ಜೋಶಿ-ಕನ್ನಡದ ನೆಲೆ, ಪುಟ-128, ಸಮಾಜ ಪುಸ್ತಕಾಲಯ, ಧಾರವಾಡ. ಮೂರನೆ ಮುದ್ರಣ-1962

(ii) ಶಿವನೆಂದರೆ ಮಂಗಲಕಾರಕ

ಗ್ರಾಮೀಣ ಪ್ರದೇಶದಲ್ಲಿ ಶಿವದೇವಾಲಯಗಳು, ನಂದಿ ದೇವಾಲಯಗಳು, ಗಣಪತಿ ದೇವಾಲಯಗಳು ಹೆಚ್ಚಾಗಿ ಕಂಡು ಬರುತ್ತಿವೆ ಮತ್ತು ಶಿವನ ಅವತಾರಿಗಳೆಂದು ಮಠಾಧೀಶರೂ ಶಿವಲಿಂಗದ ದೇವಾಲಯಗಳನ್ನು ರಚಿಸುತ್ತಿದ್ದಾರೆ. ಕೆಲವು ಕಡೆಗೆ ಶಂಭು ದೇವಾಲಯ, ಶಂಭುಕೇಶ್ವರ ದೇವಾಲಯಗಳ ರಚನೆಯಾಗಿವೆ. ಶಿವ ಮತ್ತು ಶಂಭು ಈ ಎರಡೂ ಶಬ್ದಗಳ ಮೂಲ ಶಿನ್ ಎಂಬುದಾಗಿದೆ. ಇದೇ ರೀತಿ ಶಂಕರ ಶಬ್ದದ ಅರ್ಥವೂ ಇರಬೇಕೆಂದು ಶಂಬಾ ಅವರು ತಿಳಿಸುತ್ತಾರೆ. ಶೆನ್ ಅಂದರೆ ಮಂಗಲ ಎಂಬ ಅರ್ಥ ಹಾಗೂ ಶಿನ್ ಶಬ್ದದ ಅರ್ಥವು ಕೆಂಪು. ಶಿವನಿಗೆ ಆರ್ಯರು ಮೂರನೆಯ ಕಣ್ಣು, ಉರಿಗಣ್ಣು, ಅಗ್ನಿ ಸ್ವರೂಪನಾಗಿ ಕಂಡದ್ದುಂಟು. 'ರುದ್ರೋವಾ ಏಷ ಯದಗ್ನಿ': ಎಂದು ವರ್ಣನೆಗಳಿವೆ.

ಶಿವನು ಮಂಗಲಕಾರಕನು ಎಂಬುದು ಎಲ್ಲೆಡೆಯಲ್ಲೂ ಜನಪದದಲ್ಲೂ ಹಬ್ಬಿರುವ ಸಂಗತಿ. ಜನಪದರ ಭಕ್ತಿ ಶಿವನಲ್ಲಿ ಗಟ್ಟಿಯಾಗಿದೆ.

ಶಿವ ಶಿವನೆಂದರೆ ಸಿಡಿಲೆಲ್ಲ ಬಯಲಾಗಿ
ಕಲ್ಲು ಬಂದೆರಗಿ ಕಡೆಗಾಗಿ । ಎಲೆ ಮನವೆ
ಶಿವನೆಂಬ ಶಬುದಾ ಬಿಡಬೇಡ ॥

ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಕಾರ್ಯಗಳಲ್ಲಿ ಬಂಡಿ ಹೊಡೆಯುವಾಗ, ಗಳೆ ಹೊಡೆಯುವಾಗ, ನೇಗಿಲ ಹೂಡಿದಾಗ, ಹಂತಿ ನುರಿಸುವಾಗ ಗಂಡಸರೂ, ಬೀಸುವಾಗ, ಕುಟ್ಟುವಾಗ, ಕಸ ತೆಗೆಯುವಾಗ ಹೆಂಗಸರೂ ಹಾಡ ಹಾಡುತ್ತಾರೆ. ಒಂದು ಊರಿನಿಂದ ಇನ್ನೊಂದು ಊರಿಗೆ ಜಾತ್ರೆಗೆ ಹೋಗುವಾಗ ಶಿವನನ್ನು ನೆನೆಯುತ್ತಲೇ ಹೋಗುತ್ತಾರೆ. ಕೆಲವು ಕಡೆಗೆ ಚಾಂಗ, 'ಚಾಂಗಬಲ, ಚಾಂಗ ಬಲಾ' ಎಂದು ನುಡಿಯುತ್ತ ಸಾಗುತ್ತಾರೆ. "ಮಹಾನುಭಾವ ಸಾಹಿತ್ಯ ಮತ್ತು ಜ್ಞಾನೇಶ್ವರಿಗಳಲ್ಲಿ 'ಚಾಂಗ' ಶಬ್ದ ಹೆಜ್ಜೆ ಹೆಜ್ಜೆಗೆ ಸಿಗುವಂತಹುದಾಗಿದೆ. ಮಹಾರಾಷ್ಟ್ರ ಶಬ್ದಕೋಶದಲ್ಲಿ ಚಾಂಗಶಬ್ದದ ಸಂಬಂಧವನ್ನು ಕನ್ನಡದ 'ಚೆನ್ನ'ದೊಡನೆ ಹಚ್ಚುತ್ತಾರೆ. ಆದರೆ 'ಛಾನ' ಶಬ್ದದ ಮೂಲ ಮಾತ್ರ ಅವರಿಗೆ ಅರಬೀ ಭಾಷೆಯಲ್ಲಿ ಕಾಣುತ್ತದೆ. ಅದೇನೇ ಇದ್ದರೂ 'ಚಾಂಗ' ಶಬ್ದವಾದರೂ 'ಚೆನ್ನ' ಶಬ್ದದಿಂದ ಬಂದುದು ಎಂಬುದರಲ್ಲಿ ಸಂಶಯವಿಲ್ಲ. 'ಚೆನ್ನ' ಎಂದರೆ 'ಒಳ್ಳೆಯ' ಎಂದು ಅರ್ಥ ವ್ಯವಹಾರದಲ್ಲಿದ್ದು, ಅದರ ಮೂಲ ಅರ್ಥ ಅರ್ಥ ಕೆಂಪು ಎಂಬುದಾಗುತ್ತದೆ.'

---

[5] ಶಂ. ಬಾ. ಜೋಶಿ - ಮರ್ಹಾಟಿ ಸಂಸ್ಕೃತಿ ಕೆಲವು ಸಮಸ್ಯೆಗಳು - ಪುಟ 139, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು- ಪ್ರ. ಮು. 1990

ಕನ್ನಡ ಅನು : ಕೀರ್ತಿನಾಥ ಕುರ್ತಕೋಟಿ

(iii) ಶಿವಲಿಂಗ

ಶಿವಲಿಂಗ, ಶಂಕರಲಿಂಗ, ಶಿವಲಿಂಗೇಶ್ವರ, ಶಿವಲಿಂಗೇಶ್ವರ ಗುಡಿ ಮುಂತಾದ ಹೆಸರುಗಳ ಗ್ರಾಮೀಣ ಪ್ರದೇಶದ ದೇವಾಲಯಗಳಿರುವುದನ್ನು ನೋಡುತ್ತೇವೆ. ಈ ದೇವಾಲಯಗಳಿಗೆ ಸೌಂದರ್ಯಯುಕ್ತವಾದ ಸಂಗತಿಗಳನ್ನು ನಿರ್ಮಾಣ ಮಾಡುತ್ತಾರೆ, ಭಕ್ತರಾಗುತ್ತಾರೆ. ಕೈಲಾಸದ ಕಲ್ಪನೆಯನ್ನೂ ಅಲ್ಲಿ ನಿರ್ಮಿಸುತ್ತಿದ್ದಾರೆ. ಆದರೆ ಲಿಂಗ ಮತ್ತು ಶಿವ ಇವರಲ್ಲಿ ಭಿನ್ನತೆ ಉಂಟೆಂದು ಶಂಬಾ ಅವರು ತಿಳಿಸುತ್ತಾರೆ.

ನಮ್ಮ ದೇವತೆಗಳ ಕಲ್ಪನೆಯನ್ನು ಸಮನ್ವಯ ಸಾಧಿಸಲು ಕೂಡಿ ಹೇಳುವ ರೂಢಿಯುಂಟು. ಉದಾ : ಹರಿಯೇ ಬೇರೆ ಹರನು ಬೇರೆ. ಆದರೂ ಹರಿಹರ ದೇವತೆಯ ಪ್ರಚಾರವು ಸಾಗಿತು. 'ಆದರೆ ಶಿವ ಮತ್ತು ಲಿಂಗ ಇವೆರಡೂ ಒಂದೇ ಎಂಬ ಕಲ್ಪನೆ ಇಂದಿಗೂ ಸಾರ್ವತ್ರಿಕವಾಗಿದೆ. ಮೊಹೆಂಜೋದಾರೋ-ಹರಪ್ಪಾ ಪ್ರದೇಶಗಳಲ್ಲಿ ಸಿಗುವ ಲಿಂಗ ಮತ್ತು ಯೋನಿ ಪ್ರತೀಕಗಳ ಸಂಬಂಧವನ್ನು ಶೈವ ಪಂಥದವರಿಗೆ ಜೋಡಿಸುವ ಪ್ರಯತ್ನವನ್ನು ಅನೇಕ ವಿದ್ವಾಂಸರು ಮಾಡಿದ್ದಾರೆ. ಆದರೆ ಇದರಲ್ಲಿ ವೈಚಾರಿಕ ಗೊಂದಲವಿದೆ.'[6]

ವೀರಶೈವ ಅಥವಾ ಲಿಂಗಾಯತ, ಲಿಂಗವಂತ ಪಕ್ಷಗಳು ಒಂದೆಡೆ, ಶ್ರೀ ಬಸವ-ಅಲ್ಲಮಾದಿ, ಶರಣರ ಇನ್ನೊಂದು (ಶೂನ್ಯ ಸಿಂಹಾಸನ) ಪಕ್ಷ ಎಂಬುದನ್ನು ಶಂಬಾ ತಿಳಿಸುತ್ತಾರೆ. ಅದೀಗ ಎಪ್ಪತ್ತೆಂಟು ಒಳಪಂಗಡಗಳಿಂದ ಕೂಡಿದೆ ಎಂದು ಲಿಂಗವಂತ-ಲಿಂಗಾಯತರೇ ತಿಳಿಸುತ್ತಾರೆ.

'ಲಿಂಗಸ್ಯ-ಸೂಕ್ಷ್ಮರೂಪಸ್ಯ' ಎಂದು ಶಾಂಕರ ಭಾಷೆಯಲ್ಲಿ 'ಲಿಂಗ' ಶಬ್ದದ ಅರ್ಥವನ್ನು ತಿಳಿಸಲಾಗಿದ್ದರೂ, ಆ ಅರ್ಥ ಕೆಲವರಿಗೆ ಸಹನವಾಗಿರಲಿಕ್ಕಿಲ್ಲ. 'ಶುದ್ಧ ಶೈವ ಪಂಥೀಯರಿಗೆ ಲಿಂಗರೂಪದಲ್ಲಿರುವ ಶಿವನ ಆರಾಧನೆ ಒಪ್ಪಿಗೆಯಾಗಿರಲಿಕ್ಕಿಲ್ಲ. ಅದಕ್ಕಾಗಿ ಶಿವನನ್ನು ಲಿಂಗವೆಂದು ಕರೆಯುವ ಸಾಹಸವನ್ನು ಈ ಉಪನಿಷತ್ತಿನ ಋಷಿ ಮಾಡಲಿಲ್ಲ'.[7]... ಆದರೆ ಯೋನಿಲಿಂಗ ಪಂಥ ಕ್ರಮವಾಗಿ ಮೇಲೇರುತ್ತ ಬಂದಿತು. ಆಗ ಶಿವನೇ ಪ್ರತ್ಯಕ್ಷ ಲಿಂಗವೆಂದು ಹೇಳಿ ಈ ಪಂಥವನ್ನು ಶಿಷ್ಟಮಾನ್ಯವಾಗಿ ಮಾಡಲು ಪ್ರಯತ್ನಗಳು ನಡೆದವು.'[8]

(iv) ಎ(ಯ)ಲ್ಲಮ್ಮ : ಅದಿತಿ

ಋಗ್ವೇದದಲ್ಲಿ ಇರುವ ಅದಿತಿಯ ವರ್ಣನೆಯು ಮಹತ್ವದ್ದಾಗಿದೆ. 'ಶ್ರೀದೇವಿಗಿಂತ ಆ ಮಹಾದೇವಿ ಇನ್ನು ಹೆಚ್ಚಿನ ಸಂಪನ್ನೆಯಾಗಿದ್ದಾಳೆ. ಅವಳು ಇಂದಿನ ಪ್ರಾಕೃತತರದೇವಿ ಯಲ್ಲಮ್ಮನನ್ನು ಹೋಲುತ್ತಾಳೆ.'[9] ಅದಿತಿ ನಿಜವಾಗಿಯೂ ಎಲ್ಲರ

---

[6] ಅದೇ - ಪು. 146

[7] ಅದೇ - ಪು. 147

[8] ಅದೇ - ಪು. 147

[9] ಶಂ. ಬಾ. ಜೋಶಿ 'ಹಾಲುಮತದ ದರ್ಶನ' ಪುಟ 241, ಮೊದಲ ಮು. 1960

ಅಮ್ಮ Universal Goddess ಆಗಿರುವಳು. ವಿಶ್ವಜನನಿ ಎಂದೂ ಕರೆಯಿಸಿ ಕೊಂಡಿರುವಳು.

ಈ ದೇವಿಯು ಎಲ್ಲ ದೇವತೆಗಳ ಅದಿತಿ, ವಿಶ್ವಜನನಿ ಅಕ್ಷರಶಃ ಎಲ್ಲರ ಅಮ್ಮ. ಶ್ರೀಸೂಕ್ತ ಮತ್ತು ಅದಿತಿಯ ಸ್ತೋತ್ರಗಳು 'ಮಾರಿ' ಮತ್ತು ಕಾಲಿಯ ಸಂಪ್ರದಾಯಗಳು ಕರಾಳ (ಕತ್ತಲೆ) ಎಂದು ಮಾನ್ಯವಾಗಿಲ್ಲ! ಅದಿತಿಯು ಸರ್ವಮಂಗಳೆ ವಿಶ್ವಮಾತೆ ಎಂಬುದಾಗಿ ಮಾನ್ಯವಿದೆ.

'ಅದಿತಿ ಆದಿಮಾತೆ ಎಲ್ಲರ ಅಮ್ಮ, ಆದಕಾರಣ ದೇಶೀಯ ಯಲ್ಲಮ್ಮ (ಗುಡ್ಡದ ದೇವಿ) ಸಂಸ್ಕೃತ ಸಾಹಿತ್ಯದ ಅದಿತಿಗೆ ಸರಿಸಮಾನಳಾಗಿದ್ದಾಳೆ. ಎಲ್ಲಮ್ಮ ಗಿರಿದೇವಿ ಎಂದುದರಿಂದ ಇವಳು ಗಿರಿದೇವನ ಮಡದಿಯಾಗುತ್ತಾಳೆ. ಗುಡ್ಡದ ಜಾತ್ರೆಯಲ್ಲಿ 'ಎಲ್ಲಮ್ಮ ತಾಯಿ ಉಧಯೋಸ್ತು' (ಉಧೋ ಉಧೋ); ಭವಾನಿ 'ನೀನೆ ಎಲ್ಲ ನೀನೆ ಎಲ್ಲಮಾ' ಎಂದು ಅಖಂಡವಾಗಿ ನಡೆದ ಮುದ್ಘೋಷ ಅದಿತಿದ್ಯೌ ವರ್ಣನೆಗಿಂತ ಬೇರೆಯಲ್ಲ. ಯಲ್ಲಮ್ಮನ ಭಂಡಾರ (ಅರಿಷಿನ ಪುಡಿ) ಪಡೆದು ಧನ್ಯರಾಗಲು ಲಕ್ಷಾವಧಿ ಭಕ್ತಗಣ ಹುಣ್ಣಿಮೆ [ಚಂದ್ರಾ] ಜಾತ್ರೆಗೆ ಸೇರುತ್ತಾರೆ.'[10]

ಮಾರಿ ಮತ್ತು ಕಾಳಿ ಸಂಪ್ರದಾಯವು ಕರಾಳ ಸಂಪ್ರದಾಯ ಎಂಬುದನ್ನು ಡಾ॥ ಶಂಬಾ ತಮ್ಮ ಸಾಹಿತ್ಯ ಸಂಶೋಧನೆಯಲ್ಲಿ ಮೇಲಿಂದ ಮೇಲೆ ಒತ್ತಿ ಒತ್ತಿ ಹೇಳುತ್ತಾರೆ. ಮಾರಿ ಕೊಲ್ಲುವ ದೇವತೆ ಏನನ್ನು ಕೊಲ್ಲುತ್ತಾಳೆ ಎಂದು ಚರ್ಚಿಸಿ, ಆ ತಪ್ಪು ಹೊಳೆದ ಮೇಲೆ ಅಂಬಾ-ತಾಯಿ ಶಬ್ದವನ್ನು ಸೇರಿಸಿ 'ಮಾರಿಕಾಂಬಾ' ಎಂಬುದಾಗಿ ದೇವಿಯನ್ನು ನಿರ್ಮಾಣ ಮಾಡಿ, ಸುಕ್ಷೇತ್ರಗಳೆಂದು ಹೇಳಿಕೊಳ್ಳುವ ಜನ ಯಾವ ಸತ್ಯವನ್ನು ಹಿಂಬಾಲಿಸಿದ್ದಾರೆ? ಎಂದು ಹಲವು ಬಾರಿ ಸಿಟ್ಟಿಗೆದ್ದಿರುವ ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಿದ್ದಾರೆ.

ಮಡಿಕೇರಿಯ ಸಾಹಿತ್ಯ ಸಮ್ಮೇಳನದಲ್ಲಿ ಅವರ ಕೊಠಡಿಗೆ ಪತ್ರಕರ್ತರು ಹಾಗೂ ಸಂಶೋಧಕರು ಶಂಬಾ ಅವರ ಪರೀಕ್ಷೆಗೆಂದೆ ಬಂದಂತಿತ್ತು. 'ನೀವು ಭಗವದ್ಗೀತೆಯನ್ನು ಟೀಕಿಸಿದ್ದೀರಿ?' ಎಂದಾಗ ಅವರು ನೀಡಿದ ವಿವರ : ಇಲ್ಲ, ನೀವೇ ಹೇಳಿ ಕೃಷ್ಣ ಎಂದರೆ ಕಪ್ಪು. ಕಪ್ಪು ಕತ್ತಲೆಯ ಸಂಕೇತ. ಈ ಸಂಕೇತವುಳ್ಳ ಶಬ್ದದ ಅರ್ಥ ಕಪ್ಪು ಎಂದು ಗೊತ್ತಿದ್ದ 'ಕೃಷ್ಣ' ಅರ್ಜುನ [ಶುಭ]ನಿಗೆ ಬುದ್ಧಿ ಹೇಳುತ್ತಾನೆ. ಕಪ್ಪು ಬೆಳಕಿಗೆ ಬುದ್ಧಿ ಕಲಿಸುವುದನ್ನು ಪ್ರಜ್ಞೆ ತಿಳಿಸುವುದನ್ನು ನೀವು ಒಪ್ಪುತ್ತೀರಾ? ಎಂದಾಗ ಕೆಲವು ಕ್ಷಣ ಒಬ್ಬರು ಇನ್ನೊಬ್ಬರ ಮುಖವನ್ನು ನೋಡತೊಡಗಿದರು. ನೀವು ಏನನ್ನು ಒಪ್ಪುತ್ತೀರಿ? ಬೆಳಕು ಬೇಡವಾಗಿದೆಯೇ? ಇಡೀ ಜೀವನ, ಜೀವನ-ಬದುಕಿನ ಪಾತಳಿಗೆ ಬೆಳಕು ಬೇಕೆ ವಿನಃ ಕತ್ತಲೆ ಬೇಕಾಗುತ್ತದೆ ಏನು? ಮರು ಪ್ರಶ್ನೆ ! ಆಗ ಕೆಲವರಿಗೆ ಹೊಳೆದು ನಕ್ಕು, ಇನ್ನುವರೆಗೆ ನಮಗೆ ತಿಳಿದೇ ಇದ್ದಿಲ್ಲ ಎಂದು ಉತ್ತರಗಳು ಬಂದು, 'ಬೆಳಕೇ ದೇವರು' ಎಂಬುದನ್ನು ಒಪ್ಪಿಕೊಂಡರು. ಡಾ॥ ಶಿವರಾಮಕಾರಂತರ ಬರಹಗಳನ್ನು ಅವರ ಕೃತಿ

---

[10] ಅದೇ - ಪುಟ 242

'ಬೆಳಕೇ ದೇವರು' ಅವರದೂ ವೈಚಾರಿಕ ಕೃತಿ ಎಂಬುದಾಗಿ ಒಪ್ಪಿದರು. ಈ ಬಗೆಗೆ ವಿವರಬೇಕಾದರೆ 'ಬುಧನ ಜಾತಕ' ಕೃತಿಯನ್ನು ಓದಿ ನನಗೆ ತಿಳಿಸಿರಿ ಎಂದು ಮತ್ತೆ ಹಲವಾರು ವಿವರಗಳನ್ನು ನೀಡಿದರು. ಜೀವನ ನಿಷ್ಠೆಯ ಸ್ವರೂಪ. ಸೂರ್ಯ ಸತ್ಯ; ಬೆಳಕಿನ ಆರಾಧನೆ ನಡೆಯಬೇಕು. ಜೀವನ ಸತ್ಯದ ಸ್ವರೂಪವಾಗಬೇಕು. ಬಹುಜನತೆಗೆ ಅ-ಸತ್ಯದ ರೂಪ ಹಿತವಾದಂತಿದೆ. ಕಾಲಿಯ ಪೂಜೆಯನ್ನು ಯಾರು ಯಾರು ಮಾಡಿದ್ದಾರೆ, ಮಾಡುತ್ತಿದ್ದಾರೆಂಬುದನ್ನು ನೀವುಗಳು ಬರೆದು ತಿಳಿಸಿ, ಜೀವನದ ಸತ್ಯ ಸ್ವರೂಪದ ಮಾರ್ಗ ಹಿಡಿಯಿರಿ. "Lead Kindly Light" ಕವಿಯ ಕವಿತೆಯ ಭಾವವನ್ನು ಒಪ್ಪುವುದಾದರೆ, ಬೆಳಕೇ ದೇವರಲ್ಲವೆ. ಎಲ್ಲ ಕವಿಗಳು ಬೆಳಕನ್ನೇ ಆರಾಧಿಸುತ್ತಾರೆ ಎಂದು ತಿಳಿಯಬೇಡಿರಿ. ಕತ್ತಲೆಯನ್ನು ಆರಾಧಿಸುವ ಕವಿ-ಸಂತರು ಅಲ್ಲಲ್ಲಿ ಕಾಣುತ್ತಾರೆ. ಅವರು ಇತರರ ಮೇಲೆ ಮೋಹ ಮೂಡಿಸುವವರಾಗಿದ್ದಾರೆ. ಅಂತಹ ಮೋಹಕರಿಗೆ ಸರಕಾರಿ ಪ್ರಶಸ್ತಿಗಳು ದೊರಕದೆ ಇಲ್ಲ! ಡಾ|| ಶಂಬಾ ಜೋಶಿಯವರು ಈ ಮಾತುಗಳನ್ನಾಡುವಾಗ ಗಂಭೀರತೆಯು ಅವರ ಮುಖದಲ್ಲಿ ತೋರುತ್ತಿತ್ತು. ನನ್ನದನ್ನೇ ಒಪ್ಪಬೇಕೆಂಬ ಒತ್ತಡ ನನ್ನದಲ್ಲ! ನನ್ನಲ್ಲಿ ತಪ್ಪು ಗ್ರಹಿಕೆ ಇದ್ದರೆ ದಯವಿಟ್ಟು ತಿಳಿಸಿರಿ ಎಂದು ಸುಮ್ಮನಾದರು. ಕೆಲವರು ಟಿಪ್ಪಣಿಗಳನ್ನು ಬರೆದುಕೊಂಡು, ಅವರಿಗೆ ನಮಸ್ಕರಿಸಿ ಅಲ್ಲಿಂದ ತೆರಳಿದರು.

ಇಲ್ಲಿ ಯಲ್ಲಮ್ಮನ ಬಗೆಗೆ ಬರೆಯುತ್ತಾ 'ಮಾರಿ' ಹಾಗೂ 'ಕಾಳಿ' (ಕಾಲಿ) ದೇವತೆಗಳ ಬಗೆಗೆ ತಿಳಿಸಿಯಾಯಿತು. ಈ ನಾಡಿನ ಸಿರಸಿಯ 'ಮಾರಿಕಾಂಬಾ' ಪ್ರಸಿದ್ಧಿಯನ್ನು ಕಂಡು ಇದೇನು? ಎನ್ನಬಹುದು. ಸಾಂಸ್ಕೃತಿಕರಣದ ನೆಪದಲ್ಲಿ ಅನೇಕ ಕಥೆಗಳನ್ನು ಕಟ್ಟಿ ಮಾರಿಕಾಂಬಾ ಶಕ್ತಿದೇವತೆಯಾಗಿದ್ದಾಳೆ ಎಂಬುದನ್ನು ಅನೇಕ ಮಾಧ್ಯಮಗಳಿಂದ ತಿಳಿಸುತ್ತಿದ್ದಾರೆ. ಅದೇ ಬಗೆಯಾಗಿ 'ಕಾಲಿ' ಮಾತೆಯನ್ನು ಕುರಿತು ಪ್ರಚಾರಗಳು ನಡೆದು, ಆರಾಧನೆಗಳಾಗುತ್ತಿವೆ. ಕೇಂದ್ರಗಳು ಸ್ಥಾಪನೆಗೊಂಡಿವೆ. ಇವು ಯಾರಿಗೆ ಎಷ್ಟು ಕಲ್ಪನೆಗಳನ್ನು ನೀಡುತ್ತಿವೆ ಎಂಬುದನ್ನು ನೋಡಬೇಕು.

ಯಲ್ಲಮ್ಮನ ಕೇಂದ್ರಗಳು, ಪೂಜಾ ಸ್ಥಳಗಳು ನಮ್ಮ ನಾಡಿನಲ್ಲಿ ಅಲ್ಲಲ್ಲಿ ಸ್ಥಾಪನೆಗೊಂಡಿವೆ. ಇಲ್ಲಿ ನಡೆಯುವ ಆಚರಣೆಗಳು ತಪ್ಪು ಗ್ರಹಿಕೆಗಳಿಂದ ಕೂಡಿವೆ. ಜೋಗ ಬೇಡುವುದು, ಜೋಗತಿ-ಜೋಗಪ್ಪಗಳಾಗುವುದು ಸಮಾಜಕ್ಕೂ-ಸರಕಾರಕ್ಕೂ ಬೇಡವಾಗಿದೆ. ಆದರೂ ಈ ಕಾರ್ಯ ನಡೆದಿರುವುದು ಸರಕಾರ ಜಡೆಗಳನ್ನು ಕತ್ತರಿಸಿ, ಬೇವು ಉಡಿಗೆಯನ್ನು ಅರಿವೆಯ ಮೇಲೆ ಧರಿಸುವ ಬಗೆಗೆ ತಿಳಿಹೇಳುತ್ತಿದೆ. ನಗ್ನತೆಯೇ ನಡೆದುಹೋಗುವ ಚಂದ್ರಾ-ಚಂದ್ರಗುತ್ತಿಯ ಆಚರಣೆ ಅಮಾನವೀಯವಾದದ್ದು ಎಂದು ತಿಳಿದುಬಂದಿದೆ.

ಯಲ್ಲಮ್ಮನೆಂದರೆ ಅದಿತಿ, ಅದಿತಿ ಎಂದರೆ ಯಲ್ಲಮ್ಮ ಎಂದು ತಿಳಿದ ಮೇಲೆ, ಅದಿತಿ ಹಾಲು ಮತದವರ ದೇವಿ ಎಂಬುದಾಗಿ ಶಂಬಾ ಸ್ಪಷ್ಟ ಪಡಿಸಿದ್ದಾರೆ. 'ವಿಶ್ವಜನನಿ ದೇವರು ಮಾನವಾದಿಗಳು ಎಲ್ಲರೂ 'ಅದಿತೇಃ.... ಜಾತಾಃ ಎಂಬೀ ಬಗೆಯ ವಚನಗಳು ಇವೆ. ಆದುದರಿಂದ ಅದಿತಿ ಎಲ್ಲರ ಅಮ್ಮ. ಎಲ್ಲರೂ ಒಂದೇ ತಾಯಿಯ ಮಕ್ಕಳು;

ಜಾತಿ ಭೇದ ಮೇಲು ಕೀಳು ಎಂಬ ಈ ಬಗೆಯ ಸಂಕುಚಿತ ವಿಚಾರಕ್ಕೆ ಸ್ವಲ್ಪವೂ ಇಂಬು ಇಲ್ಲ. ಪುರುಷ ಸೂಕ್ತ ಮತ್ತು ಅದಿತಿಯ ಸ್ತೋತ್ರಗಳನ್ನು ರಚಿಸಿದ ಋಷಿಗಳು 'ವಸುಧೈವ ಕುಟುಂಬಕ' ದೃಷ್ಟಿಯ ಆದಿ ಪುರುಷರು ಎಂದು ಹೇಳಲು ಅಡ್ಡಿತೋರದು.'[11] ಎಲ್ಲಮ್ಮ (ರೇಣುಕೆ) ಸ್ಥಳಗಳು, ಕೆಲವು ಕಡೆಗೆ ಪುಣ್ಯಕ್ಷೇತ್ರಗಳೆಂದು ಬಗೆಯಲಾಗಿದೆ. ಚಂದ್ರಗುತ್ತಿ, ಕೊಕಟನೂರ, ಅಥಣಿ ಇತ್ಯಾದಿ ಸ್ಥಳಗಳು ರೇಣುಕೆ ಮಾತಂಗಿಯರ ಜಾತ್ರಾ ಸ್ಥಳಗಳಾಗಿ ಗ್ರಾಮದೇವತೆಗಳಾಗಿ ಹೆಸರುವಾಸಿಯಾಗಿವೆ. ಹುಣ್ಣಿವೆಗೆ ಜಾತ್ರಾ ರೀತಿಯ ಜನಕೂಡುತ್ತದೆ. ಹಗಲು-ರಾತ್ರಿಗಳ ಪರಿವೆಯೇ ಇವರಿಗಿಲ್ಲ. ಕರ್ನಾಟಕ-ಮಹಾರಾಷ್ಟ್ರಗಳಿಂದ ಜನ ಕಿಕ್ಕಿರಿದು ಕೂಡುತ್ತಾರೆ. ಈಗಿನ ಈ ಆಚರಣೆಗಳು ಪ್ರಜ್ಞಾವಂತರಿಗೆ ಲೈಂಗಿಕ ಆಚರಣೆಗಳೆಂದೇ ತಿಳಿಯುತ್ತಿವೆ. ಯಲ್ಲಮ್ಮನಂತೆ ಮಾತಂಗಿಯೂ ಪುರಾಣಕಾಲದ ವ್ಯಕ್ತಿಯ ಹೆಸರಾಗಿರಬೇಕೆಂದು ಶಂಬಾ ಅವರು ತಿಳಿಸುತ್ತಾರೆ.

ಯಲ್ಲಮ್ಮ ಚಾತುರ್ವರ್ಣ್ಯದವರ ಅದಿತಿ ರೇಣುಕೆಯಂತೆ ಮಾತಂಗಿಯೂ ಆಗಿದ್ದಾಳೆ. ಆದರೆ ವಸಿಷ್ಠನ ಮಡದಿಯ ಹೆಸರು 'ಮಾತಂಗಿ' ಇತ್ತು ಎಂಬುದು ಸ್ಪಷ್ಟ. 'ಮಾತಂಗಿಯು ಇಂದು ಜೋಗತಿಯರ ದೇವಿ. ರೇಣುಕೆಯಂತೆ ಮಾತಂಗಿಯೂ ಎಲ್ಲಮ್ಮ (ಅದಿತಿ) ದೇವಿಗೆ ಸರ್ವಾರ್ಪಣ ಮಾಡಿದ ಯೋಗಿನಿಯಾಗಿರುವ ಶಕ್ಯತೆಯುಂಟು.'[12]

ನಮ್ಮ ನಾಡಿನಲ್ಲಿ ಸವದತ್ತಿ (ಸುಗಂಧಪುರ) ಎಲ್ಲಮ್ಮನ ಪ್ರಸಿದ್ಧ ಕ್ಷೇತ್ರ ಸುತ್ತಲಿನ ರಾಜ್ಯದ ಜನತೆಗೂ ಆಕರ್ಷಕ ಕ್ಷೇತ್ರವಾಗಿದೆ. ರೇಣುಕೆಯ ಮುಖ್ಯಕ್ಷೇತ್ರ. ಎಲ್ಲಮ್ಮನ ಸುತ್ತ ಮಾತಂಗಿ ಇರುವಂತೆ ಸತ್ಯಮ್ಮನು ಇದ್ದಾಳೆ. ಸವದತ್ತಿಯ ಯಲ್ಲಮ್ಮನ ಪಶ್ಚಿಮ ದಿಕ್ಕಿನಲ್ಲಿ ಜೋಗುಳ ಭಾವಿ (ಈಗ ಅಣೆಕಟ್ಟಿನಿಂದ ನೀರು ಆವೃತವಾಗಿರುವ) ಇದೆ. ಬದಿಯಲ್ಲಿ ಸತ್ಯಮ್ಮ ಗುಡಿ ಇದೆ. ಜನ ಇಲ್ಲಿಯೂ ಜೋಗ ಹಾಕುತ್ತಾರೆ. ಬೇಡಿಕೆಗಳನ್ನು ಬೇಡುತ್ತಾರೆ. ಹರಕೆ ಸಲ್ಲಿಸುತ್ತಾರೆ. ನೈವೇದ್ಯ ತೋರಿಸುತ್ತಾರೆ. ಈ ಸತ್ಯವ್ವ(ಮ್ಮ) ಯಾರು ಎಂದು ತಿಳಿಯುವದು ಅವಶ್ಯ. ಒಟ್ಟು ತಿಳಿವಳಿಕೆಯಲ್ಲಿ ಯಲ್ಲಮ್ಮನ ಸಂಬಂಧಿಕಳು ಎಂದು ಅರ್ಥವಾಗುತ್ತದೆ. ಅದು ಜನಪದರ ಕಲ್ಪನೆಯಾಗಿದೆ. ಒಂದು ತ್ರಿಪದಿ

ಯಲ್ಲವ್ವ ನಿನಮಗ ಎಳಿಯ ಪರಶುರಾಮ
ಯಾರ ತೂಗಿದರು ಮಲಗೊಲ್ಲ । ಜೋಗಳಭಾವಿ
ಸತ್ತೆವ್ವ(ಮ್ಮ) ತೂಗಿದರ ಸಪನಿದ್ದೆ ॥

ಏಳುಕೊಳ್ಳಗಳಿಂದ ಆವೃತವಾದ ಈ ಎಲ್ಲಮ್ಮನ ಗುಡ್ಡವು ಹಾಲು ಮತದವರ ಎಲ್ಲರ ಅಮ್ಮ (ಅದಿತಿ), ರಟ್ಟರ ಆಳ್ವಿಕೆಯಲ್ಲಿ ಪದ್ಮಾವತಿಯಾಗಿ ಪೂಜೆಗೊಂಡು,

---

[11] ಅದೇ ಪುಟ -245

[12] ಅದೇ ಪುಟ -245

ಬಳಿಕ ಸಮೂಹದ ದೇವತೆಯಾಗಿ ಎಲ್ಲರಮ್ಮ ಎಲ್ಲಮ್ಮನಾಗಿ ಪೂಜೆಗೊಳ್ಳುತ್ತಿರುವ ದೇವತೆಯಾಗಿರುವಳು. ನಮ್ಮ ಸಂಸ್ಕೃತಿ ನಿಜ ಸಂಸ್ಕೃತಿಯ ಕಡೆಗೆ ತಿರುಗಬೇಕಾದಲ್ಲಿ ಯಲ್ಲಮ್ಮನ ಕಟ್ಟುಕತೆಗಳು, ಹಾಡುಗಳು ಸಂಗ್ರಹವಾಗಬೇಕೆಂದು ಸಂಶೋಧಕರು ಹೇಳುತ್ತಲೇ ಬಂದಿದ್ದಾರೆ.

ರೋಗ ರುಜಿನಗಳು ಬರಬಾರದೆಂದು ಬೇಡಿಕೊಳ್ಳುವ ಜನರಿಗೆ, ಅನೀತಿ ಆಚರಣೆಗಳಿಗೆ, ಮೂಢನಂಬಿಕೆಗಳಿಗೆ ಬೆಳಕು ನೀಡುವುದು ಅವಶ್ಯವಿದೆ.

(v) ಮಲ್ಲಯ್ಯ - ಮಲ್ಹಾರಿ

ಅಧ್ಯಯನ ದೃಷ್ಟಿಯಿಂದ ಮಲ್ಲ + ಅಯ್ಯ (ಮಲೆ + ಅಯ್ಯ) ಮಲ್ಲಯ್ಯ ಎಂಬುದು ಕನ್ನಡಿಗರು ಹೆಸರಿಸಿದ ದೇವರು. ಮಲೆ ಅಂದರೆ ಪರ್ವತ, ಅಯ್ಯಾ ಎನ್ನುವುದು ಸನ್ಮಾನಾರ್ಥಕ ಪದವಾಗಿದೆ. 'ಪರ್ವತ'ಕ್ಕೆ ಕನ್ನಡಿಗರು ಗುಡ್ಡ ಎಂದೂ ಕರೆಯುವುದುಂಟು. ಗುಡ್ಡದ ದೇವರು ಎಂದರೆ, ಗುಡ್ಡಪ್ಪ, ಗುಡದಪ್ಪ, ಗಿರಿಯಪ್ಪ ಎಂದು ವ್ಯಕ್ತಿಗಳಿಗೆ ನಾಮಗಳುಂಟು. ಹಾಗೆ ಗುಡದೂರ, ಗುಡಮಕೇರಿ, ಗಿರಿದೂರು ಎಂದು ಗ್ರಾಮಗಳಿಗೆ ಹೆಸರುಂಟು. ಹಟ್ಟಿಕಾರರಿಗೆ ಅಂದರೆ ಹಾಲು ಮತದವರಿಗೆ, ಗೋಪಾಲಕರಿಗೆ ಪರ್ವತ ರೂಪದಲ್ಲಿ ಶಿವಪೂಜೆ ಇದೆ ಎನ್ನುವುದು ಜನಪದದಲ್ಲೂ ಉಂಟು. ಒಂದು ತ್ರಿಪದಿ

ಗುಡ್ಡದ ವಾರ್‍ಯಾಗ ಗುಗ್ಗಳ ಹೊಗಿನ್ಯಾಕ
ಅಪ್ಪ ಮಲ್ಲಯ್ಯನ ಶಿವಪೂಜೆ । ಆಗುವಾಗ
ಆಕಾಶದ ಗಂಟಿ ನುಡಿದಾವ ॥

ಇನ್ನೊಂದು ಇದೇ ಅರ್ಥ ನೀಡುವ ತ್ರಿಪದಿಯೂ ಇದೆ.

ಗುಡ್ಡದ ವಾರ್‍ಯಾಗ ಗುಗ್ಗಳ ಹೊಗಿನ್ಯಾಕ
ಅಪ್ಪ ಗುಡದಯ್ಯನ ಶಿವಪೂಜೆ । ನಡೆದಾಗ
ಆಕಾಶದ ಗಂಟಿ ಘನಲೆಂದೋ ॥

ಕರ್ನಾಟಕದಲ್ಲಿ ಮಲೆ ಮೂಲ ಶಬ್ದದಿಂದ ಲಿಂಗಾಯತ, ಕುರುಬರು, ಇತರರಲ್ಲೂ ಶೈವ ಸಂಪ್ರದಾಯದ ಮನೆತನಗಳಲ್ಲಿ ಮಲ್ಲಪ್ಪ, ಮಲ್ಲಯ್ಯ, ಮಲ್ಲಿಕಾರ್ಜುನ, ಮಲ್ಲೇಶ, ಮಲ್ಲಿನಾಥ ಎಂಬಂತ ಹೆಸರುಗಳು ದೊರೆಯುತ್ತವೆ. ಈ ರೀತಿ ಮಹಾರಾಷ್ಟ್ರದ ಕೆಲವು ಲಿಂಗಾಯತ ಮನೆತನಗಳಲ್ಲಿ ಹೆಸರಿರುವುದನ್ನು ಕೇಳಿದ್ದೇವೆ. ಹಟ್ಟಿಕಾರರಲ್ಲೂ (ಧನಗರ) ಉಂಟು. ಮಹಾರಾಷ್ಟ್ರದಲ್ಲಿರುವ 'ಮಲ್ಹಾರಿ'ಯನ್ನು ಮಲ್ಲಯ್ಯನೆಂದೇ (ಶಿವನೆಂದೇ) ಕನ್ನಡಿಗರು ಬಗೆದಿದ್ದಾರೆ. ಶಿವದೇವಾಲಯದಂತೆ ಮಲ್ಲಯ್ಯನ ದೇವಾಲಯಗಳ ರಚನೆಗಳುಂಟು. ಪ್ರಸಿದ್ಧವಾದ ಮಂಗಸುಳಿ ಮಲ್ಲಯ್ಯನನ್ನು ಶಿವನರೂಪ ಸ್ವರೂಪವೆಂದು ಬಗೆದಿರುವರು. ಹಾಲು ಮತದ ವಗ್ಗರಲ್ಲಿ ಪರ್ವತ ಮಲ್ಲಯ್ಯನ ಹಾಡುಗಳುಂಟು. ಶ್ರೀಶೈಲ ಸಂಪ್ರದಾಯದ ಕಂಬಿ ಪೂಜಕರು ಪರ್ವತ ಮಲ್ಲಯ್ಯನನ್ನು ಶಿವನೆಂದೇ

ಆರಾಧಿಸುತ್ತಾರೆ. ದೇವರಗುಡ್ಡದ ಮಲ್ಲಯ್ಯನಂತೂ ಶಿವನ ಅವತಾರವೆಂದು ಪ್ರತೀತಿ. ಪೂಜಾ ಮತ್ತು ಜಾತ್ರಾ ವಿಧಾನಗಳೆಲ್ಲವೂ ಭಯ-ಭಕ್ತಿಯಿಂದ ಸಾಗುತ್ತವೆ. ಶಿವ ಅಂದರೆ ಮಲ್ಲಯ್ಯನ ಬಗೆಗೆ ಪುರಾಣಗಳುಂಟು.

'ಮಲ್ಹಾರಿ' ಎಂಬ ದೇವತೆ ಕರ್ನಾಟಕದಲ್ಲಿಲ್ಲವೆಂದು ಹೇಳಬೇಕು. ಈ ದೇವತೆ ಮಹಾರಾಷ್ಟ್ರದ ಜನತೆಯಿಂದ ಪೂಜೆಗೊಳ್ಳುವ ದೇವತೆ. ಮಹಾರಾಷ್ಟ್ರದಲ್ಲಿ ಈ ದೇವತೆಗೆ ಮಲ್ಹಾರಿ, ಮೈರಾಳ, ಮಲ್ಲಾರಿ-ಮಾರ್ತಾಂಡ, ಮಾಳಸಾ ಮಾರ್ತಾಂಡ ಮೊದಲಾದ ವಿವಿಧ ಹೆಸರುಗಳನ್ನು ಶಂಬಾ ಅವರು ಸೂಚಿಸುತ್ತಾರೆ. ಖಂಡೋಬಾ-ಮಲ್ಹಾರಿ ಎಂದು ಬಗೆಯಲಾಗಿದೆ. ಖಂಡೋಬಾ ಶಿವನ ಅವತಾರಿ ಎಂದು ಬಗೆಯುವುದು ತಪ್ಪಾಗುತ್ತದೆ ಎಂಬುದಾಗಿ ಶಂಬಾ ಅವರು ಎರಡು ಕಾರಣಗಳನ್ನು ನೀಡುತ್ತಾರೆ. ಶಿವನ ವಾಹನ ನಂದಿ, ಆದರೆ ಖಂಡೋಬಾನ ವಾಹನ ಕುದುರೆ. ಶಿವನು ತ್ರಿಶೂಲಧಾರಿ, ಖಂಡೋಬಾ ಖಡ್ಗದಾರಿ. ಹಾಗಾದರೆ ಈ ದೇವರು ಯಾರು? ಎಂದು ಶಂಬಾ ಅವರು ಪ್ರಶ್ನಿಸಿ, ಖಡ್ಗದಾರಿ ಖಂಡೋಬಾ ಅಲ್ಲ ಕಾರ್ತಿಕೇಯ ಎಂಬ ವಾದವನ್ನು ಸಂಶೋಧನೆಯಿಂದ ತಳ್ಳಿ ಹಾಕಿದ್ದಾರೆ. **ಓಪರ್ಟ** ಎಂಬುವರ ಸಂಶೋಧನೆ ನಿರಾಧಾರವೆಂದೂ ಹೇಳಿದ್ದಾರೆ. ಮಲ್ಹಾರಿ-ಖಂಡೋಬಾ ಎಂಬುದು ಕಾರ್ತಿಕೇಯ ಎಂಬ ವಾದ **ಶ್ರೀ ಜಾಧವರಾವ** ಎಂಬವರಿಗೂ ಒಪ್ಪಿಗೆ ಇಲ್ಲ ಎಂಬುದನ್ನು 'ಕಿರ್ಲೋಸ್ಕರ' ಎಂಬ ಪತ್ರಿಕೆಯಲ್ಲಿ ಬಂದ ಸಂಗತಿಯನ್ನೂ ತಿಳಿಸಿದ್ದಾರೆ.

ಇಂದ್ರನಿಗೂ ಪರ್ವತಕ್ಕೂ ಆಗುತ್ತಿರಲಿಲ್ಲ! 'ಈ ದೃಷ್ಟಿಯಿಂದ ಮಲ್ಹಾರಿ (ಮಲೆ + ಅರಿ) ಎಂದರೆ ಪರ್ವತಗಳ ವೈರಿ ಎಂಬುದು ತಿಳಿಯುತ್ತದೆ. ಮಲೆ (ಪರ್ವತ) ಹಾಗೂ ಇಂದ್ರರ ವಿರೋಧ ಇದ್ದಿತೆಂದು ಭಾಗವತ ಪುರಾಣದಲ್ಲಿ (10ನೆಯ ಸ್ಕಂದ) ಇದ್ದಿತೆಂದು ಶಂಬಾ ಅವರು ವಿವರಿಸಿದ್ದಾರೆ. 'ಮಲ್ಹಾರಿ ಮೂರ್ತಿ ಅಶ್ವಾರೋಹಿ ಯಾಗಿದ್ದು ಅವನ ಕೈಯಲ್ಲಿ ಖಡ್ಗದಂತ ಆಯುಧವಿರುವದರಿಂದ ಕೂಡ ಈ ದೇವತೆ ಇಂದ್ರನಿರಬೇಕೆಂದು ಅನಿಸುತ್ತದೆ.'[13]

ಮಲ್ಹಾರಿಗೆ ಆರಾಧನೆಗಳನ್ನು ಸಲ್ಲಿಸುವುದು ಜಾತ್ರೆ ನಡೆಯಿಸುವುದು ವೀರವತ್ತಾಗಿಯೇ ಸಾಗುತ್ತವೆ. ಕೆಲವು ಗ್ರಾಮದೇವ ಯಾದ ಮಲ್ಹಾರಿಗೆ ರಥವನ್ನು ಗೊತ್ತು ಮಾಡಿದ್ದಾರೆ.

ಡಾ|| ಶಂಬಾ ಅವರು ಮಲ್ಹಾರ-ಮೈಲಾರ, ಮೈರಾಳ ಹೀಗೆ ಶಬ್ದದ ಉತ್ಪತ್ತಿಯನ್ನು ಕೋಶಕಾರರು ಲಕ್ಷ್ಯಕ್ಕೆ ತೆಗೆದುಕೊಂಡಿಲ್ಲವೆಂದೂ, 'ಕುಮಾರವ್ಯಾಸ ಭಾರತದಲ್ಲಿ 'ರಣ-ಮಲ್ಹಾರ' ಶಬ್ದ ಪ್ರಯೋಗ ಇರುವುದನ್ನೂ ತಿಳಿಸಿದ್ದಾರೆ. ಖಂಡೋಬಾ-ಮಲ್ಹಾರಿ

---

[13] ಶಂ.ಬಾ. ಜೋಶಿ - ಮರ್ಹಾಟಿ ಸಂಸ್ಕೃತಿ ಕೆಲವು ಸಮಸ್ಯೆಗಳು, ಪುಟ-158, ಅನು: ಕೀರ್ತಿನಾಥ ಕುರ್ತಕೋಟಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಈ ದೇವತೆಗಳು ವೀರರಿಗೆ ಸ್ಫೂರ್ತಿಯನ್ನು ನೀಡುವ ದೇವತೆಗಳಾಗಿರುವುದನ್ನು ವಿವರಿಸಿದ್ದಾರೆ. ಮಲ್ಲಯ್ಯ ಕನ್ನಡಿಗರಿಗೆ ಶಿವನ ದರ್ಶನವಾದರೆ, ಮಹಾರಾಷ್ಟ್ರೀಯರಿಗೆ ಅಲ್ಲಿ ಮಲ್ಹಾರಿ (ಇಂದ್ರ) ಕಾಣುತ್ತಾನೆ. ಅದು ಅವರವರ ಸ್ವಭಾವಕ್ಕೆ ಅನುಗುಣವಾಗಿದೆ.'[14]

ನಮ್ಮ ದೇಶದ ಜನತೆಗೆ ಸೂರ್ಯೋಪಾಸನೆಯು ಹೊಸದೇನೂ ಅಲ್ಲ! 'ಮಲ್ಹಾರಿ-ಮಾರ್ತಾಂಡದಲ್ಲಿ ಸೂರ್ಯೋಪಾಸನೆಯ ಅವಶೇಷ ಇರುವುದನ್ನು ಗಮನಿಸಬೇಕು. ಸೂರ್ಯನಿಗೆ ಮೂರ್ತಿಪೂಜೆ ಇಲ್ಲವೆಂದು ಶಂಬಾ ಅವರು ತಿಳಿಸಿದ್ದಾರೆ. ಬರಬರುತ್ತ ಗುಪ್ತ ವಾಕಾಟಕರ ಕಾಲಕ್ಕೆ* ಸೂರ್ಯನ ಮೂರ್ತಿ ಪೂಜೆ ಪ್ರಾರಂಭವಾದುದನ್ನು ಗಮನಿಸಬೇಕಾಗುವುದು.

'ಮಲ್ಹಾರಿ ಎಂಬ ಹೆಸರು ಹೇಗೆ ಬಂದಿತೆಂಬುದು ಮಲ್ಹಾರಿ ಪುರಾಣದಿಂದಲೇ ಗೊತ್ತಾಗುತ್ತದೆ. ಮಲ್ಲಾಸುರನೆಂಬ ದೈತ್ಯನನ್ನು ಕೊಂದುದರಿಂದ ಮಲ್ಹಾರಿ ಎಂಬ ಹೆಸರು ಪ್ರಾಪ್ತವಾಯಿತೆಂದು ವರ್ಣನೆ ಇದೆ.'[15] ಈ ಬಗೆಯಾಗಿ ಕೆಲವು ಡೊಳ್ಳಿನ ಹಾಡುಗಳು ಕನ್ನಡ ಜನಪದದಲ್ಲಿ ತೋರುತ್ತಿವೆ.

(vi) ಹನುಮ ದೇವರು ಅಥವಾ ಮಾರುತಿ ದೇವರು

ಕಂನಡ ನಾಡಿಗೆ ಹನುಮನುದಿಸಿದ ನಾಡೆಂದು ಪ್ರಖ್ಯಾತಿ ಇದೆ. ಗ್ರಾಮಗಳಲ್ಲಿ ಹನುಮ, ಹನುಮಾನ, ಹನಮಂತ, ಹನುಮಂತ ದೇವರು ಬಹುಪ್ರಚಲಿತವಾಗಿರುವ ದೇವರು. ಹೆಚ್ಚಾಗಿ ಕರ್ನಾಟಕದಲ್ಲಿ ಈ ದೇವರು ಬಲಶಾಲಿಯ ಪ್ರತೀಕವಾಗಿರುವನು. ಹನಮಾಪುರ, ಹನುಮನೂರ, ಹನುಮಬಾಗ, ಹನುಮಗುಡಿ ಓಣಿ ಮುಂತಾದ ಹೆಸರುಗಳನ್ನು ಕಾಣುತ್ತೇವೆ. ಮಹಾರಾಷ್ಟ್ರದಲ್ಲಿ ಮಾರುತಿ, ಮಾರುತಿದೇವರು (ಆಂಜನೇಯ), ಮಾರುತಿಪುರ, ಮಾರುತಿಮಾಳ, ಮಾರುತಪಲ್ಲೆ ಇತ್ಯಾದಿ ನಾಮಗಳು ವ್ಯಕ್ತಿಗಳಿಗೂ-ಸ್ಥಳಗಳಿಗೂ ಇರುವುದು ಸ್ಪಷ್ಟ. ಇತ್ತೀಚೆಗೆ ಕರ್ನಾಟಕದಲ್ಲಿ ಮಾರುತಿ ಹೆಸರು ವ್ಯಕ್ತಿಗಳಿಗೂ ಧಾರಣವಾಗಿವೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ಆಂಧ್ರದ ಕೆಲವು ಭಾಗಗಳಲ್ಲಿ ಮಾರುತಿ ಮಂದಿರಗಳು ಬಹುವೈಭವಯುಕ್ತವಾಗಿ ಕಟ್ಟಲ್ಪಟ್ಟಿವೆ. ಮಧ್ಯಪ್ರದೇಶ, ಉತ್ತರ ಪ್ರದೇಶಗಳಲ್ಲೂ ಜೈಹನುಮಾನ, ಜೈಮಾರುತಿ ಮಂದಿರಗಳೂ ಇವೆ. ಗ್ರಾಮದಿಂದ ದೂರದಲ್ಲಿ ಕಟ್ಟಲ್ಪಟ್ಟ ಹನುಮ ಮಂದಿರಗಳು ಆಧುನಿಕರ ಪುರಗಳಲ್ಲಿ ಮಾರುತಿ ಪುರದ ಮಧ್ಯದಲ್ಲಿ ಸೇರಿರುತ್ತಾನೆ.

ಇಂತಹ ಮಾರುತಿಯ ಗುಡಿಗೆ ಜನರು ತಮ್ಮ ಬೇನೆ ಬೇಸರಿಕೆಗಳನ್ನು ಕಳೆದುಕೊಳ್ಳಲು, ನಿರೋಗಿಗಳು ಬಲವಂತರಾಗಲು, (ಪೈಲ್ವಾನರಾಗಲು) ದಿನಾಲು

---

[14] ಅದೇ ಪುಟ -161

* Vakataka Gupta by R. C. Mujamdar & Dr. Altekar.

[15] ಅದೇ ಪುಟ -163

ಹನುಮ ಮಂದಿರಕ್ಕೆ ಹೋಗುತ್ತಾರೆ. ಗರಡಿಯವರು, ವಿದ್ಯಾರ್ಥಿಗಳು, ರೋಗಿಗಳು, ವ್ಯಾಪಾರಸ್ಥರು, ಸ್ತ್ರೀಯರು ಮುಂತಾದವರು ನಡೆದುಕೊಳ್ಳುವ ರೀತಿ-ನೀತಿ ಪ್ರತಿದಿನವೂ ನಡದೇ ಇದೆ. ಅದರಲ್ಲೂ ಶನಿವಾರ ಹನಮಪ್ಪನ ವಾರವಾಗಿದೆ. ಈ ದಿವಸ ಜನಜಾತ್ರೆಯೇ ಕೂಡುತ್ತದೆ. ಕರ್ಪೂರ, ತೆಂಗಿನಕಾಯಿ, ಹೂವಿನಹಾರ ಈ ಹನುಮಂತ ದೇವರಿಗೆ ಅರ್ಪಿತವಾಗಿ, ಹನಮಂತನ ಪ್ರಸಾದ (ಬೂದಿ) ಭಕ್ತರ ಹಣೆ ತುಂಬುತ್ತದೆ. ಭಕ್ತರು ಮನದಲ್ಲಿ ಕಲ್ಪಿತವನ್ನು ಇಷ್ಟಾರ್ಥಗಳನ್ನು ಬೇಡಿಕೊಳ್ಳುತ್ತಾರೆ. ಕಾರ್ತಿಕಮಾಸದಲ್ಲಿ ಮಾರುತಿಯ ಜಾತ್ರೆ ಜರುಗುತ್ತದೆ.

ಈ ದೇವರು ಬಲಭೀಮನೂ ವೀರದೇವನೂ ಆಗಿರುವನು. ಮರುತರ ತಂದೆಯಾದ ರುದ್ರ-ಶಿವನು, ಶಿವನೇರುದ್ರನು; ರುದ್ರನೇ ಶಿವನು ಎಂಬುದು ಸ್ಪಷ್ಟವಾಗಿ ತಿಳಿದುದಾಗಿದೆ.

ರಾಮಾಯಣದ ಹನುಮಂತನಿಗೆ ಜನರು ಹೀಗೆ ನಡೆದುಕೊಳ್ಳುತ್ತಾರೆಂಬುದು ತಿಳಿದ ಸಂಗತಿಯಾದರೂ, ಈ ಮಾರುತಿ ಅದಕ್ಕೂ ಪೂರ್ವಕಾಲದ ದೇವರೆಂಬುದನ್ನು ಶಂಬಾ ತಿಳಿಸುತ್ತಾರೆ.

'ಋಗ್ವೇದದ ಋಚಗಳಲ್ಲಿ ಇದರ ಉತ್ತರವು ನನಗೆ ದೊರೆತಿದೆ. ಈ ದೇವರು ಬರೀ ರಾಮಾಯಣ ಕಾಲದ ದೇವರಲ್ಲ! ವೇದಕಾಲದಿಂದಲೂ ಪರಂಪರೆಯಿಂದಲೂ ಬಂದ ದೇವರು ಇದು. ಮರುತರೆಂಬ ಹೆಸರಿನಲ್ಲಿ ವೇದಕಾಲದಲ್ಲಿ ಪೂಜೆಗೊಳ್ಳುತ್ತಿದ್ದ ದೇವತೆಯನ್ನೇ ವಾಲ್ಮೀಕಿಯು ತನ್ನ ಪ್ರತಿಭಾ ಶಕ್ತಿಯ ಪ್ರಭಾವದಿಂದ ರಾಮಾಯಣದ ಕುಂದಣದಲ್ಲಿ ಹೊಳೆವ ಒಂದು ರತ್ನವನ್ನಾಗಿ ಮಾಡಿದ್ದಾನೆ. ರಾಮಾಯಣ ಕಾಲದ ಒಬ್ಬ ಮಹಾವೀರನಿಗೆ ಮಾರುತಿಗೆ, ವೇದ ಕಾಲದ ಮರುತ್ ಪರಂಪರೆಯನ್ನು ತಂದು ತಳಕು ಹಾಕಿದ್ದಾನೆ. ನಮ್ಮ ಆದಿಕವಿ ಪಂಪನು ಅರಿಕೇಸರಿಯನ್ನು ವಿಕ್ರಮಾರ್ಜುನನನ್ನು ಮಾಡಿದಂತೆ.'[16]

ವಾಲ್ಮೀಕಿಯು ರಾಮಾಯಣದಲ್ಲಿ ಅಂಗದ, ನೀಲ ಜಾಂಬವರನ್ನು ಬಿಟ್ಟು ಮಾರುತಿಯ ಯೋಜನೆಯನ್ನೇ ಸಂಜೀವಿ ತರುವ ಕಾರ್ಯಕ್ಕೆ ಒಪ್ಪಿಸಿದ್ದು ತುಂಬ ಔಚಿತ್ಯ ತೋರಿದ್ದಾನೆ. 'ಮಾರುತಿಯನ್ನು ಆರಾಧಿಸುವ ಪದ್ಧತಿ ಋಗ್ವೇದದಿಂದ ಕಂಡು ಬರುತ್ತದೆ. ಆ ಪರಂಪರೆಯು ತಲೆ ತಲಾಂತರಗಳಿಂದ ಸಾಗಿ ಬಂದುದನ್ನು ನಮ್ಮ ಹಳ್ಳಿಗರಲ್ಲಿ ಈಗಲೂ ಕಾಣಬಹುದು. ಹನುಮನ (ಮರುತನ) ಹಕ್ಕನ್ನು ವೆಂಕಟೇಶ, ರಾಮ, ಕೃಷ್ಣಾದಿ, ಬೇರೆ ದೇವತೆಗಳು ಕಳೆದುಕೊಂಡಿವೆ. ಹಳ್ಳಿಗರು ಮಾತ್ರ ಇನ್ನೂ ಹನುಮನ (ಮರುತರ) ಬೆನ್ನು ಬಿಟ್ಟಿಲ್ಲ. ವೇದಕಾಲದ ನಡವಳಿಕೆಯು ಅವರಲ್ಲಿ ಇನ್ನೂ ಜೀವಂತವಾಗಿದೆ.'[17]

---

[16] ಶಂ. ಬಾ. ಜೋಶಿ - ಶಿವರಹಸ್ಯ, ಪುಟ 60-61, ಎರಡನೆಯ ಅಚ್ಚು 1949

[17] ಅದೇ ಪುಟ -66

ನಮ್ಮ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನೂರಕ್ಕೆ ಅರ್ಧದಷ್ಟು ಗುಡಿಗಳಲ್ಲಿ ಹನುಮಂತ ದೇವರ ಗುಡಿಗಳಿವೆ. 'ಗ್ರಾಮದೇವ ಹನುಮಪ್ಪ'ನಾಗಿದ್ದಾನೆ. ವೈಭವದಿಂದ ಗುಡಿಗಳು ಮತ್ತೆ ರಚನೆಯಾಗುತ್ತಿವೆ. ವೇದಕಾಲದ ದೇವರು ಗ್ರಾಮೀಣ ಜನತೆಯ ಜನಪದ ದೇವರಾಗಿದ್ದಾನೆ ಈ ನಮ್ಮ ಹನುಮಪ್ಪ.

(vii) ಕೆಲವು ದೇವಿಯರು

'ಜಗದಂಬಾ' ಈ ಶಕ್ತಿದೇವಿಯ ಹೆಸರು ಮಹಾಮಾತೆ, ಲೋಕಜನನಿ, ಸಿಂಹವಾಹಿನಿ, ಮಹಿಷಾಸುರ ಮರ್ದಿನಿ, ಪರಮೇಶ್ವರಿ, ವೈಷ್ಣವೀ, ಲಕ್ಷ್ಮೀ ಮುಂತಾದವುಗಳಾಗಿ ಅರ್ಥ ಹೇಳಿದುದರಿಂದ ಈ ಜಗದಂಬಾ ಹೆಸರು ಸಂದಿಗ್ಧವಾಗಿದೆ ಎಂದು ಶಂಬಾ ಅವರು ತಿಳಿಸುತ್ತಾರೆ. ವೇದ, ಉಪನಿಷತ್ತು, ಪುರಾಣ, ಶಾಸ್ತ್ರ ಆಗಮಗಳನ್ನು ಇಡಿಯಾಗಿ ಶ್ರುತಿಯನ್ನು ಅನುಸರಿಸಿದರೆ, ಸ್ಪಷ್ಟವಾದ ಅರ್ಥಗೋಚರಿಸದೆ ವಿವಿಧ ಅರ್ಥಗಳು ಗೋಚರವಾಗಿ, ಅವುಗಳೆಲ್ಲ ಶಕ್ತಿಯ ರೂಪವಾಗಿ ಜಗದಂಬಾಗೆ ರೂಪುಗೊಳ್ಳುತ್ತಿವೆ.

ಕನ್ನಡ ಜನಪದದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮದೇವತೆಯರನ್ನು ಅಧ್ಯಯನ ಮಾಡಿದಾಗ, ಕರಿಯವ್ವ, ಕಾಟೆವ್ವ, ಮರಗವ್ವ, ಮುರಗಮ್ಮ, ಉದ್ದಮ್ಮ, ಲಕ್ಕಮ್ಮ, ಲಗಮಮ್ಮ, ಕಣ್ಣಮ್ಮ, ಕಾಳಮ್ಮ, ದೊಡ್ಡಮ್ಮ, ಮಂಗಳಮ್ಮ, ಮದ್ದೂರಮ್ಮ, ಮಾರಮ್ಮ, ಕಬ್ಬಾಳಮ್ಮ, ತಾಯಮ್ಮ, ಗುಡಚಮ್ಮ, ಉಡಚಮ್ಮ, ಹುಲಗಮ್ಮ, ಗಂಗಮ್ಮ, ಗೌರಮ್ಮ, ಲಕ್ಷಮ್ಮ, ಹೊಳೆಮ್ಮ, ಚಂಡೆಮ್ಮ ಮುಂತಾದ ಅಮ್ಮಗಳೆಲ್ಲರೂ ಶಕ್ತಿದೇವಿಯರಾಗಿ ಪರಿಣಮಿಸುವ ಸ್ಥಳ ಪುರಾಣಗಳನ್ನು ಜನರು ತಿಳಿಸುತ್ತಾರೆ. ಪ್ರಾಚೀನತೆಯನ್ನು ಹೇಳುತ್ತಾರೆ. ಒಂದಿಲ್ಲೊಂದು ಬಗೆಯಲ್ಲಿ ರಾಕ್ಷಸರನ್ನು ದುಷ್ಟರನ್ನು, ನೀಚರನ್ನು ಈ ಅಮ್ಮಂದಿರು ಕೊಂದಿರುವ ಕಥೆ ಹಾಗೂ ಘಟನೆಗಳನ್ನೂ, ದೃಷ್ಟಾಂತಗಳನ್ನೂ ತಿಳಿಸುತ್ತಿದ್ದಾರೆ, ಹೇಳುತ್ತಿದ್ದಾರೆ. ಅವರ ಬಗೆಗೆ ಸಾಹಿತ್ಯ ಸೃಷ್ಟಿಸುವ ರೀತಿ, ಹಿಂದಿನ ದಾಖಲೆಗಳು ಇಂದಿನ ದನಿ ಸುರಳಿಯಲ್ಲಿ ಮೂಡಿ ಬರುತ್ತಿವೆ. ಅವು ಭಾವಾತ್ಮಕವಾಗಿಯೂ ಇರಬಹುದು.

'ಅಮ್ಮ' ಶಬ್ದದ ಮುಂದೆ 'ದೇವಿ' ಎಂಬ ಅರ್ಥವನ್ನು ಸೇರಿಸಿ, ತಾವೇ ಸೃಷ್ಟಿಸಿದ 'ಅಮ್ಮ'ನಿಗೆ 'ದೇವಿ' ಹೆಸರಿಸುವ ಪದ್ಧತಿ ಒಂದು ರೀತಿಯ ಸಾಂಸ್ಕೃತೀಕರಣವಾಗಿ ಮಾರ್ಪಾಡಾಗುತ್ತಿದೆ. ಅಮ್ಮನಿದ್ದೂ 'ದೇವಿ'ಯರ ಪೂಜೆಯ ದಿನಗಳು ಮಂಗಳವಾರ, ಶುಕ್ರವಾರ ಜರಗುತ್ತಲಿವೆ. ಹೇಳಿಕೆ-ಕೇಳಿಕೆಗಳು ಅಲ್ಲಿ ನಡೆಯುತ್ತಿವೆ. ಕೆಲವರಿಗೆ ಆವೇಶವೂ ಆಗುತ್ತಿದೆ.

'ಗ್ರಾಮದೇವತೆಗಳ ವಿಷಯದಲ್ಲೂ ಸಾಂಸ್ಕೃತೀಕರಣ* ನಡೆದು ಅವುಗಳಿಗೆ ಕೆಲವೆಡೆ ಸಂಸ್ಕೃತದ ಹೆಸರುಗಳೂ ಸಾತ್ವಿಕ ಅಥವಾ ಶಾಸ್ತ್ರೋಕ್ತ ಪೂಜೆಗಳೂ ಸಲ್ಲುತ್ತವೆ.

---

* Sanskritisation

ಎಷ್ಟೇ ಸಾಂಸ್ಕೃತೀಕರಣವಾಗಿದ್ದರೂ ಗ್ರಾಮ್ಯದೇವತೆಗಳು ತಮ್ಮ ಪ್ರಾಕ್ತನತೆಯನ್ನು ಉಳಿಸಿಕೊಂಡಿವೆ. ಮಾನವ ಶಾಸ್ತ್ರಜ್ಞರಾಗಲಿ, ಜಾನಪದ ಶಾಸ್ತ್ರಜ್ಞರಾಗಲಿ ಗ್ರಾಮ್ಯದೇವತೆಗಳ ಸೂಕ್ಷ್ಮ ಅಧ್ಯಯನಕ್ಕಿಂತ ಸ್ವಾರಸ್ಯವಾದ ವಸ್ತು ಮತ್ತೊಂದು ದೊರಕಲಾರದು. ಅಂತಹ ಅಧ್ಯಯನ ಪುರಾತನ ಮನುಷ್ಯ ಜನಾಂಗದ ಬಗ್ಗೆ ಎಷ್ಟೋ ಬೆಳಕನ್ನು ಚೆಲ್ಲುತ್ತವೆ.'[18]

ಶಂಬಾಜೋಶಿಯವರು ಸಾಂಸ್ಕೃತೀಕರಣವನ್ನು ಒಪ್ಪುತ್ತಾರೆ. ಆದರೆ ಈ ಸಾಂಸ್ಕೃತೀಕರಣ ನಿರ್ವಾಣಗೊಳ್ಳುವಾಗ ತಪ್ಪುಗ್ರಹಿಕೆ ಅಥವಾ ಧಾರಣ ಆಗುವುದೆಂಬುದನ್ನು ಎಚ್ಚರಿಸುತ್ತಾರೆ. ದೇವರ, ದೇವನ ಹೆಸರಿನಲ್ಲಿ 'ದೆವ್ವನ' ಪೂಜೆ ನಡೆದಿದೆ ಇಂದು ಎಲ್ಲೆಲ್ಲೂ ಎಚ್ಚರ! ಎಚ್ಚರ!' ದೃಷ್ಟಾರನೆಂಬ ಖ್ಯಾತಿಯ ಡೆಕಾರ್ಟ ಹೇಳುವ ಅನುಭವದ ಮಾತು ಇದು. ದೇವನನ್ನು ಮರೆಮಾಚಿ ಕಪಟನಾಟಕ ಸೂತ್ರಧಾರಿ, ವಂಚಕ, ಅನೃತ ಸ್ವರೂಪೀ ಮೃತ್ಯು ತತ್ವವು ಲೋಕದಲ್ಲಿ ಪೂಜ್ಯವಾಗಿದೆ ಎಚ್ಚರ!'[19]

ಈ ಹೇಳಿಕೆಯು ಸತ್ಯವೆನಿಸದೆ ಇರದು. ಗೋಕಾಕ ತಾಲ್ಲೂಕಿನಲ್ಲಿ ಪೂರ್ವದಿಕ್ಕಿಗೆ ಘಟಪ್ರಭೆಯ ದಂಡೆಯ ತಿಗಡಿ ಊರಿನಿಂದಾಚೆ ಒಂದು ತೋಟವಿದೆ. ಅಲ್ಲಿ ಗೆದಲವ್ವ ದೆವ್ವಾಗಿ ತಿರುಗುತ್ತಿದ್ದಾಳೆ ಎಂಬ ಸಂಗತಿ ಈಗ 20 ವರ್ಷಗಳಾಚೆ ಪ್ರಚಲಿತವಿತ್ತು. ಈ ಹೊತ್ತು ಗೆದಲವ್ವ-'ಗೆದಲವ್ವದೇವಿ' ಎಂದು ಪೂಜಾರ್ಹವಾಗಿದ್ದಾಳೆ. ಹೆಸರುವಾಸಿಯಾದ ಸ್ಥಳವಾಗಿದೆ. ಈ ದೃಷ್ಟಿಯಿಂದ 'ಏಳು ಮಕ್ಕಳ ತಾಯಿ'ಯ ನೆನಪಾಗದೆ ಇರದು!

ಏಳು ಮಕ್ಕಳ ತಾಯಿ

ಕಂನಾಡಿನಲ್ಲಿ ಅಲ್ಲಲ್ಲಿ 'ಏಳು ಮಕ್ಕಳು ತಾಯಿ'ಯ ಪೂಜೆ ನಡೆದಿದೆ. ಈ ಏಳು ಮಕ್ಕಳ ತಾಯಿ ಯಾರು? ಎಂಬುದನ್ನು ಅಲ್ಲಲ್ಲಿ ಮೌಖಿಕವಾಗಿ ಕೇಳಿಯಾಗಿದೆ. ಕೆಲವರು ಬರೆದೂ ಆಗಿದೆ. ಈ ಏಳು ಮಕ್ಕಳ ತಾಯಿ ವಿಧವೆ(ರಂಡೆಮುಂಡೆ) ಆಗಿದ್ದಳು. ತನಗೆ ಏಳೂ ಮಕ್ಕಳನ್ನು ಬಡತನದಲ್ಲಿ ಸಾಕಲಾಗಲಿಲ್ಲ. ಗಂಡನೂ ಬಡತನದಲ್ಲಿ ಬೆಂದು ತೀರಿಹೋಗಿದ್ದನು. ಕಾರಣ ಅವಳೂ ಬಡತನದಿಂದ ಬಳಲುತ್ತ ಚಿಂತಿಸಿ, ಚಿಂತಿಸಿ ಸವೆದಳು. ಆಹಾರವಿಲ್ಲದೆ ತಾನು ತನ್ನ ಮಕ್ಕಳು ಕೊರಗಿದರು. ತಾನೊಬ್ಬಳೆ ಏಕೆ ಸಾಯಬೇಕೆಂದು ಮಕ್ಕಳನ್ನು ಜೀವಘಾತ ಮಾಡಿದಳು. (ಕೆಲವರ ಹೇಳಿಕೆಯಂತೆ ಭಾವಿ ಹಾರಿದರು. ಇನ್ನು ಕೆಲವರು ತಿಳಿಸುವಂತೆ ಅಡುಗೆಯಲ್ಲಿ ವಿಷ ಬೆರೆಯಿಸಿ ನುಂಗಿ ಸತ್ತರು). ಕೆಲವು ದಿನಗಳಿದ ಬಳಿಕ ಆ ತಾಯಿ ದೆವ್ವಾದಳು. ಏಳು ಮಕ್ಕಳು, ಏಳು ಮಕ್ಕಳು, ಬಡತನ ಬಡತನ ಎಂದು ಅರಿಚುತ್ತಲೇ ತಿರುಗುತ್ತಿದ್ದಳು. ಇದರಿಂದ ಆ

---

18 ಡಾ॥ ಎಂ. ಚಿದಾನಂದಮೂರ್ತಿ, ಹೊಸತು ಹೊಸತು, ಪುಟ-377, ಕನ್ನಡ ವಿಶ್ವವಿದ್ಯಾಲಯ ಹಂಪಿ, ಪ್ರ-1993

19 ಪ್ರೊ॥ ಜ್ಯೋತಿ ಹೊಸೂರು - ಪ್ರಜ್ಞಾ ಪ್ರವಾಹ, ಭಾಗ-೨, ಪುಟ-30, ಮಾನವಧರ್ಮ ಪ್ರತಿಷ್ಠಾನ ಸಂಸ್ಮರಣ ಸಂಚಿಕೆ.

ಗ್ರಾಮದವರು ಅಂಜಿ ಆಕೆಗೆ ಆಹಾರ ನೀಡುತ್ತಿದ್ದರು. (ಹಾರಾ ಇಡುತ್ತಿದ್ದರು). ಇನ್ನು ಕೆಲವರು ಮೂರ್ತಿ ಮಾಡಿ ಪೂಜಿಸಲು ಸುರು ಮಾಡಿದರು. ಮತ್ತೆ ಕೆಲವರು ಗುಡಿ ಕಟ್ಟಿದರು. ಬಲಿ ನೀಡಿದರು. ರೂಢಿ ಸುರುವಾಯಿತು. ಕಥೆ ಕಟ್ಟಿದರು. ಇದರಿಂದ ಏಳು ಮಕ್ಕಳ ತಾಯಿ ದೇವಿಯಾದಳು. ಬಿಜಾಪೂರ ಜಿಲ್ಲೆಯ ಗೊಳಸಂಗಿ ಗ್ರಾಮದಲ್ಲಿ ಈಗಲೂ ಏಳು ಮಕ್ಕಳ ತಾಯಿಯನ್ನು ಪೂಜಿಸುವುದನ್ನು ಕಾಣುತ್ತೇವೆ.

(viii) ವೈಭವದ ಶಕ್ತಿ ದೇವತೆಗಳು

ಶ್ರೀ ಚಾಮುಂಡೇಶ್ವರಿ

ಚಾಮುಂಡಿ, ಚಾಮುಂಡೇಶ್ವರಿ ಎಂದು ಕರ್ನಾಟಕ ಜನತೆಯ ಶಕ್ತಿ ದೇವಿಯಾಗಿ, ದರ್ಶನದೇವಿಯಾಗಿ, ಇಷ್ಟಾರ್ಥಗಳ ಸಿದ್ಧಿದೇವಿಯಾಗಿ ಪೂಜೆಗೊಳ್ಳುತ್ತಿರುವ ಮೈಸೂರಿನ ಚಾಮುಂಡೇಶ್ವರಿ ಬೆಟ್ಟದ ದೇವಿ ಎಂಬುದು ತಟ್ಟನೆ ನಾಡಿನವರಿಗೆ ತಿಳಿದಿರುವ ಜನಪ್ರಿಯ ಹೆಸರೆಂಬುದು ಸತ್ಯ ಸಂಗತಿಯಾಗಿದೆ.

ಆದರೆ ಈ ಪ್ರಸಿದ್ಧಿ ಹೊಂದಿರುವ ದೇವಿಯು ಕನ್ನಡ ಜನಪದರ ನಾಲಿಗೆಯ ಮೇಲಿನ ಜಾನಪದ ಮತ್ತು ಶಿಷ್ಟ ಸಂಸ್ಕೃತಿಗಳನ್ನು ಸಮ್ಮಿಳನಗೊಳಿಸಿಕೊಂಡ ಚಾಮುಂಡೇಶ್ವರಿಯೇ ಆಗಿರುವಳು.

'ಮಹಿಷಾಸುರ ಮರ್ದಿನಿ' ಎಂದು ಪುರಾಣದ ಪುರಾವೆಗಳಿಂದ ಚಾಮುಂಡೇಶ್ವರಿಯಾಗಿ ಮಹಿಷಮರ್ದಿನಿಯಾಗಿ, ಸಿಂಹರೂಪಿಣಿಯಾಗಿ ಶಕ್ತಿ ನಾಮಾವಳಿಯನ್ನು ಹೊಂದಿರುವ ದೇವತೆ ಚಾಮುಂಡೇಶ್ವರಿ.

ಪೂರ್ವ ಇತಿಹಾಸ

'ವಾಸ್ತವವಾಗಿ ನಾವಿಂದು ಯಾವುದನ್ನು ಚಾಮುಂಡಿ ಬೆಟ್ಟವೆಂದು ಕರೆಯುತ್ತೇವೆಯೋ ಅದನ್ನು ಪುರಾಣಗಳಲ್ಲಿ 'ಮಹಾಬಲಗಿರಿ' ಎಂದು ಉಲ್ಲೇಖಿಸಲಾಗಿದೆ. ಸ್ಕಾಂದ, ವಾರಾಹ ಮತ್ತು ಕಾಳಿಕಾಪುರಾಣಗಳಲ್ಲಿ ಈ ಸ್ಥಳ ಮಹಿಮೆಯನ್ನು ಕುರಿತು ಉಕ್ತಿಗಳಿವೆ.'[20]

ಮಾನವರ ಸಂಸ್ಕೃತಿಯ ಪಾತಳಿಗಳನ್ನು ಗುರುತು ಮಾಡುತ್ತ ಹೋದ ಹಾಗೆ, ಮೂಲವಾದ ಸತ್ಯ ಸಂಗತಿಗಳನ್ನು ಬಿಚ್ಚಿ ತೋರಿಸುವ ಕಾರ್ಯ ಸಂಶೋಧನೆಯಲ್ಲಿ ನಡೆಯುತ್ತದೆ. ಮೈಸೂರ ಅರಸರ ಸಾಂಸ್ಕೃತಿಕ ಉತ್ಸವಗಳಿಂದ ಚಾಮುಂಡಿ ಮೂಲದಲ್ಲಿ ಚೌಡಿ, ಚಾಮುಂಡಿ, ಚಾಮುಂಡೇಶ್ವರಿ ಹೆಸರು ಪಡೆದು ವೈಭವದ ದೇವಿಯಾಗಿದ್ದಾಳೆ. ಚೌಡ-ಚಾಮುಂಡ ಅಸುರರನ್ನು ಹೊಡೆದು ಈ ಹೆಸರುಗಳನ್ನು ಪಡೆದ ಐತಿಹ್ಯ ಈ ದೇವಿಗಿದೆ. ಮೈಸೂರಿನ ಸುತ್ತಮುತ್ತಲಿನ ಹಳ್ಳಿ, ಹಟ್ಟಿಗಳಲ್ಲಿ ಚಾಮುಂಡಿಯನ್ನು ಗ್ರಾಮದೇವಿ

[20] ಸೂ. ಸುಬ್ರಹ್ಮಣ್ಯಂ, ಶ್ರೀ ಚಾಮುಂಡೇಶ್ವರಿ, ಪು-12, ಐ. ಬಿ. ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು - ಮುದ್ರಣ-1978.

ಎಂದು ಪೂಜಿಸುತ್ತಿದ್ದಾರೆ. 'ಮೈಸೂರ ಅರಸರು ಬೆಟ್ಟದ ಮೇಲಿನ ಮಹಿಷಾಸುರ ಮರ್ದಿನಿಯನ್ನು ಶ್ರೀ ಚಾಮುಂಡೇಶ್ವರಿಯಾಗಿ ತಮ್ಮ ಕಾಲದ ಆರಾಧ್ಯದೇವಿಯಾಗಿ ಪೂಜಿಸಲಾರಂಭಿಸಿದ ಮೇಲೆ ಮರ್ಬಳದ ತೀರ್ಥಕ್ಕೆ ಚಾಮುಂಡಿಬೆಟ್ಟವೆಂಬ ಹೆಸರು ಬಂದು ಜನಪ್ರಿಯವಾಗಿರಬೇಕೆಂಬ ಅಭಿಪ್ರಾಯವಿದೆ.'[21] ಚಾಮುಂಡಿಯ ಬೆಟ್ಟವು ಭಕ್ತ ಜನತೆಯ ಪುಣ್ಯಕ್ಷೇತ್ರವಾಗಿ ಪರಿಣಮಿಸಿದರೆ, ಪ್ರವಾಸಿಗಳಿಗೆ ಅದರಲ್ಲೂ ಮೈಸೂರ ದಸರಾ ಉತ್ಸವದಲ್ಲಿ ಪ್ರೇಕ್ಷಣೀಯ ಸ್ಥಳವಾಗಿದೆ. ವಿಶ್ವವಿಖ್ಯಾತ ದಸರೆ ಹಬ್ಬವು ನಾಡಿನ, ರಾಷ್ಟ್ರೀಯ, ವಿಶ್ವದ ಹಬ್ಬವಾಗಿ ಪರಿಣಮಿಸುತ್ತಿದೆ. ಶಂಬಾ ಜೋಶಿಯವರು ಸಾಂಸ್ಕೃತೀಕರಣ ಮತ್ತು ವೈಭವೀಕರಣಗಳನ್ನು ಅಲ್ಲಗಳೆಯುತ್ತಿರಲಿಲ್ಲ. ಆದರೆ ಅವು ಪ್ರಜ್ಞಾನೇತ್ರದಿಂದ ನಡೆಯಬೇಕೆಂದು ಇಚ್ಛಿಸುತ್ತಿದ್ದರು. ದೇವಿಯ ಪೂಜೆಯನ್ನು ಎರಡು ಉದ್ದೇಶಗಳಿಂದ ಮಾಡಲಾಗುತ್ತಿದೆ. 'ಒಂದು ಅನಿಷ್ಟದ ನಿವಾರಣೆಗಾಗಿ, ಇನ್ನೊಂದು ಸಂಪತ್ತು-ಸಂತತಿಯ ಪ್ರಾಪ್ತಿಗಾಗಿ' ಎಂದು ಪದೇ ಪದೇ ಹೇಳುತ್ತಿದ್ದರು. ಕೆಲವು ಮಠಾಧೀಶರು ದೇವಿಯನ್ನು ಸ್ತುತಿಸುವುದು ದೇವಿ ಪುರಾಣವನ್ನು ಓದಿಸುವುದು ಪರಂಪರೆಯಾಗಿರುವುದನ್ನು ಕಾಣುತ್ತೇವೆ. ಬಹುಶಃ ಅವರದು ಮೊದಲನೆಯ ಉದ್ದೇಶ ಇರಬಹುದೆಂದು ನನ್ನೆದುರು ಒಮ್ಮೆ ಹೇಳಿರುವುದುಂಟು. ಜನಪದರ ಸ್ತುತಿಗಳು ಎರಡೂ ಇಚ್ಛೆಗಾಗಿ ಇರಬಹುದು. ಆದರೆ ತಮ್ಮ ಇಚ್ಛೆ ಈಡೇರುವುದಕ್ಕಾಗಿ ನರಬಲಿ-ಪ್ರಾಣಬಲಿ ಇವೆಲ್ಲವುಗಳೂ ರಕ್ತದ ಬಗೆಗಿನವು ಮತ್ತು ಮೂಢತನದವುಗಳೂ ಆಗಿವೆ. ಸಾಧುಪ್ರಾಣಿಗಳನ್ನು ಬಲಿಕೊಡುವುದು, ಕ್ರೂರ ಪ್ರಾಣಿಗಳನ್ನು ಬಲಿಕೊಡದೇ ಇರುವುದು ಅಭ್ಯಸನೀಯವಾದ ಸಂಗತಿ ಎಂಬುದಾಗಿಯೂ ತಿಳಿಸಿರುವರು. ಪೂಜೆಯನ್ನು ಸಲ್ಲಿಸುವ, ಬಲಿಯನ್ನು ನೀಡುವ ಸಂಪ್ರದಾಯ ಅಮಂಗಳ, ಹಿಂಸಾತ್ಮಕ, ಅಶುಭ ಸೂಚಕಗಳೇ ಆಗಿವೆ. ಗ್ರಾಮದೇವತೆಗಳ ಗುಡಿಯ ಸುತ್ತಮುತ್ತ ನಾಗಪ್ರತಿಮೆಗಳನ್ನಿಟ್ಟಿರುವುದನ್ನು ಕಾಣುತ್ತೇವೆ. ನಾಗನನ್ನು ಪೂಜಿಸುವ ಸಂಪ್ರದಾಯವು ಸಾಗಿದೆ. ಇದು ಬಹು ಪುರಾತನವಾಗಿರುವುದನ್ನು ಋಗ್ವೇದ ಕಾಲದಿಂದಲೂ ಕಾಣುತ್ತೇವೆ. ಕರ್ನಾಟಕದ ಕರಾವಳಿಯ ಪ್ರದೇಶದಲ್ಲಿ 'ನಾಗಮಂಡಲ'ವನ್ನು ರಚಿಸಿ ಪೂಜಿಸುತ್ತಿರುವ ವೈಭವದ ಕಾರ್ಯಾಚರಣೆಯನ್ನು ಕಾಣುತ್ತೇವೆ. ಕೆಲವೆಡೆಗಳಲ್ಲಿ ಭೂತ ಕುಣಿತ, ಭೂತದ ಕೋಲುಗಳಿಗೆ ಹರಕೆ ಹೊರುತ್ತಾರೆ. ಇವೆಲ್ಲವುಗಳು ಅರಿವಿನಿಂದಾದವುಗಳೇ? ಎಂಬುದಾಗಿ ಶಂಬಾ ಪ್ರಶ್ನಿಸುತ್ತಿದ್ದರು. "ಇಂದಿನ ಪೂಜೆ ಯಾರದು ಜೀವನದೋ ಮೃತ್ಯುವಿನದೋ? ಈಗ ಅಂದಿನ ಋಷಿವರ್ಗವೂ ಇಲ್ಲ; ಯಜ್ಞಸಂಪ್ರದಾಯವೂ ಇಲ್ಲ. ಇರಬೇಕೆಂದರೂ ಮರಳಿ ಇರಲು ಆಚರಿಸಲು ಶಕ್ಯವಿಲ್ಲ. ಸರ್ಪವನ್ನು ಅಂದರೆ ಮೃತ್ಯುವನ್ನು ಆರಾಧಿಸುತ್ತಿರುವುದು ಮಾತ್ರ ನಿಜವಿದ್ದದ್ದೇ ಆದರೆ, ಸರ್ಪವನ್ನು ಎಂದರೆ ಸಂಕಟ ವಿಪತ್ತು ಮೃತ್ಯುವನ್ನೇ ದೇವರೆಂದು ಆರಾಧಿಸುತ್ತಿರುವೆವು ಎಂದು ಕಣ್ಣು ತೆರೆದು ನೋಡಿ ಒಪ್ಪು ಇಚ್ಛೆ ಮಾತ್ರ ನಮಗಿಲ್ಲ!'[22]

---

[21] ಅದೇ ಪುಟ - 16

[22] ಶಂಬಾ ಜೋಶಿ - ಋಗ್ವೇದ ಸಾರ, ನಾಗಪ್ರತಿಮಾ ವಿಚಾರ ಭಾಗ-೨, ಮೂಲ ಪ್ರಬಂಧ, ಪ್ರಸಾರಾಂಗ, ಮೈ.ವಿ.ವಿ.-1971, ಪುಟ-49.

ಈ ರೀತಿಯಾದ ನಾಗಪೂಜೆ ಎಂದಿನಿಂದ ಪ್ರಾರಂಭವಾಗಿದೆ. ಮೂಲದಲ್ಲಿ ಯಾರು ಇದನ್ನು ಕಲ್ಪಿಸಿದರು ಎಂಬ ಪ್ರಶ್ನೆಗೆ ಶಂಬಾ ಅವರ ವಿಶೇಷ ಅಧ್ಯಯನದ ದೇವತೆಗಳ ಬಗೆಗಿನ ಸಂಶೋಧನ ಕೃತಿ 'ಋಗ್ವೇದ ಸಾರ' ನಾಗಪ್ರತಿಮಾ ವಿಚಾರವೇ ಸಾಕ್ಷಿ.

'ಮಾನವ ಜನಾಂಗಕ್ಕೆ ಮೊತ್ತಮೊದಲು ದೇವತೆಗಳ ಅಸ್ತಿತ್ವವು ತಿಳಿದು ಬಂದುದು. ಮೈಯಲ್ಲಿ 'ಆವೇಶ' ಬರುತ್ತಿದ್ದ ಕೆಲವೊಂದು ಭಾವೋನ್ಮತ್ತ 'ಭಕ್ತ' ವರ್ಗದಿಂದಲೇ, ಆದಕಾರಣ ನಾಗಪೂಜೆ ಎಂದರೆ 'ನಾಗ'ನು ಮೈಯಲ್ಲಿ ಬರುತ್ತಿದ್ದಂತಹ ಒಂದು 'ದಿವ್ಯ' ವ್ಯಕ್ತಿಯ ಪೂಜೆಯಿಂದಲೇ ಈ ಸಂಪ್ರದಾಯವು ಆರಂಭವಾಗಿದೆ ಎಂಬಲ್ಲಿ ಸಂದೇಹವೇ ಇಲ್ಲ.'[23]

ಶಂಬಾ ಅವರ ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ವೈಚಾರಿಕತೆಗಳ ಚಿಂತನಶೀಲ ಗತಿಯನ್ನು ಗೌರೀಶ ಕಾಯ್ಕಿಣಿ ಒಪ್ಪಿಕೊಂಡು 'ಅದಿತಿ, ಅಂಭೃಣಿ, ಬ್ರಾಹ್ಮಣಸ್ಪತಿ, ವಿಶ್ವಕರ್ಮ, ಮರಗವ್ವ, ಎಲ್ಲಮ್ಮ, ಮಾರಿ, ಮಾಳವ್ವ ಇತ್ಯಾದಿ ದೇವತಾ ವಿಚಾರವು ಮಾರ್ಮಿಕವಾಗಿದೆಯೆಂದರೆ ಏನೂ ಆದಂತೆ ಅಲ್ಲ. ವಿಶೇಷತಃ ಎಲ್ಲಮ್ಮ ಮತ್ತು ಅದಿತಿ ಇವರ ಕುರಿತು ವಿಶ್ಲೇಷಣೆ, ಹಾಗೆಯೇ ಕೊಟ್ಟರೀದೇವಿ ಕೊಟ್ಟರವ್ವ, ಕೊಟ್ಟರಪ್ಪ, ಅದೇ ರೀತಿ ಮುರುಗ ಮರುಳ, ಮರಿಯಪ್ಪ (ಕುಮಾರ ರುದ್ರ) ಇವರ ಮೂಲ ಮೌಲ್ಯ ಮಾಪನವು ಅತ್ಯಂತ ಉದ್ಬೋಧಕವಾಗಿದೆ. ಶಬ್ದ ಸಂಕೇತದ ಒಳಗಿನ ವಿಚಾರದ ಗುಟಿಕೆಯನ್ನು ಒಡೆದು ತೋರಿಸುವ ವಿಚಕ್ಷಣತೆಯು ಶಂಬಾ ಅವರ ಪ್ರತಿಭೆಯ ಒಂದು ಲಕ್ಷಣವಂತೆ.[24] ಶಂಬಾ ಅವರು ವೇದಗಳನ್ನು ರಚಿಸಿದ ಋಷಿವರ್ಗವನ್ನು ಕೃತಜ್ಞತೆಯಿಂದ ನೆನಯಿಸುತ್ತಾರೆ. ಮೂಲ ವೇದದ ಬರಹಗಳನ್ನು ತಿರಿವಿದವರನ್ನು ಕಟುವಾಗಿ ನಿಂದಿಸುತ್ತಾರೆ.

❖ ❖ ❖

[23] ಅದೇ ಪುಟ - 7

[24] ಗೌರೀಶ ಕಾಯ್ಕಿಣಿ - ಪ್ರಜ್ಞಾನೇತದ ಬೆಳಕಿನಲ್ಲಿ - ಪುಟ - 95, ಕಾಲಗತಿ ಪ್ರಕಾಶನ ರಾಯಬಾಗ, ಜಿ॥ ಬೆಳಗಾವಿ - ಪ್ರಕಟಣೆ - 1982.

ಅನುಬಂಧ

(1) ಮಾನವ ಧರ್ಮದ ಪ್ರತಿಪಾದಕ

ಡಾ॥ ಶಂಕರ ಬಾಳದೀಕ್ಷಿತ ಜೋಶಿಯವರು ಕನ್ನಡ ಸಾಹಿತ್ಯ, ಸಂಸ್ಕೃತಿ, ಸಂಶೋಧನೆಗಳಲ್ಲಿ ಕೆಲಸ ಮಾಡಿ, ಮಾನವತಾವಾದದ ವಿಚಾರಗಳನ್ನು ಅವರ ಕೃತಿಗಳಲ್ಲಿ ಹಾಗೂ ಬಾಳು-ಬದುಕಿನಲ್ಲಿ ತೋರಿಸಿಕೊಟ್ಟಿದ್ದು ಸುಸ್ಪಷ್ಟವಾಗಿದೆ.

ಶಂ.ಬಾ. ಅವರು ವಿನಯಶೀಲರಾಗಿದ್ದರು. ಸತ್ಯ ಆಚರಣೆಗೆ ಮನಸ್ಸು ಹಿಗ್ಗಿಸುತ್ತಿದ್ದರು. ಆದರೆ ಸತ್ಯ ಆಚರಣೆಯಂತೆ ನಟಿಸುವವರನ್ನು ಸೇರುತ್ತಿರಲಿಲ್ಲ! ನಯ-ವಿನಯಗಳು ಮನುಷ್ಯನ ಬಾಳಿಗೆ ಅವಶ್ಯ ಬೇಕಾಗಿರುವ ಸಂಸ್ಕೃತಿಯ ಎಳೆಗಳಾಗಿವೆ. ಅವು ಮಾನವನನ್ನು ಮುಂದಕ್ಕೆ ಒಯ್ಯುವುವು. ಹಲವರ ಪ್ರೀತಿಗೆ ಪಾತ್ರರನ್ನಾಗಿ ಮಾಡುವುವು. ನಯ-ವಿನಯವಿಲ್ಲದವರು ಸುಸಂಸ್ಕೃತರೇ ಅಲ್ಲ. ಸಂಸ್ಕೃತಿಯನ್ನು ಆಚರಿಸಲು ನಯವು ಶ್ರದ್ಧಾಪೂರ್ವಕವಾಗಿ ಇರಬೇಕಾದುದು. ಇದರಿಂದ ಹಾನಿ ಕಡಿಮೆ, ಲಾಭವೇ ಹೆಚ್ಚು. 'ಮಾನ ಕೊಡುವವರೇ ಮಾನ ಪಡೆಯುವವರಾಗಿರುತ್ತಾರೆ' ಎಂಬುದು ಜಗದ ನೀತಿಯಾಗಿದೆ. ಈ ಜಗತ್ ನೀತಿಯನ್ನು ಗಂಭೀರವಾಗಿ ತಿಳಿಯತಕ್ಕದೆಂದು ಅನೇಕ ಘಟನೆಗಳ ಮೂಲಕ, ಕಥೆಗಳ ಮೂಲಕ ಸಿದ್ಧಪಡಿಸುತ್ತಿದ್ದರು. ಇವು ನಿಮ್ಮಲ್ಲಿರಲಿ, ಯಾರ ಹೆಸರನ್ನು ಹೇಳುವುದು ಬೇಡ ಎಂಬುದಾಗಿ ತಿಳುವಳಿಕೆಯನ್ನು ಶಂಬಾ ನಗುನಗುತ್ತಾ ತಿಳಿಸುತ್ತಿದ್ದರು.

ಆತ್ಮಪ್ರಜ್ಞೆಯನ್ನು ಹೊಂದಿದ್ದ ಶಂಬಾ ಅವರು ತಮ್ಮ ಕೆಲಸಗಳಿಗಾಗಿ ಯಾರಿಗೂ 'ಜೀಯಾ', 'ಹೌದಪ್ಪ' ಎಂದನ್ನಲಿಲ್ಲ. ಸತ್ಯದ ಆಚರಣೆ ಇದೆ ಎಂದು ತಿಳಿದಾಗ ಸಹಜವಾಗಿ ಅವರ ಎರಡು ಕೈಗಳು ಹೃದಯದ ಮೇಲೆ ಕಾಣಿಸಿಕೊಂಡು, ಹಾಗೆ ಕ್ಷಣ ಹೊತ್ತು ನಿಲ್ಲುತ್ತಿದ್ದವು.

ಶಂಬಾರವರು ಜಾತಿಯ ವಿಚಾರದಲ್ಲಿ ಮಾನವತಾವಾದಿಯಾಗಿದ್ದರು. ಮಾನವರೆಲ್ಲ ಒಂದೇ ಎಂಬುದನ್ನು ಬಾಲ್ಯದಲ್ಲಿಯೇ ಆಚಾರ್ಯರೆದುರು ಆಡಿ ತೋರಿದರು. ಜೀವನದಲ್ಲಿ-ಸಾಹಿತ್ಯದಲ್ಲಿ ಆಚರಿಸಿ ತೋರಿದರು. ಕೆಲವು ಬ್ರಾಹ್ಮಣರು ಶಂಬಾ ಅವರನ್ನು, ಇವನೊಬ್ಬ ವಿಚಿತ್ರ ಬ್ರಾಹ್ಮಣನೆಂದು ಕರೆದರು. ಅನ್ಯ ಮಹಿಳೆಯೊಬ್ಬಳ ಹೆರಿಗೆ ತಮ್ಮ ಮನೆಯಲ್ಲಾಯಿತು. ಸಂಬಂಧಿಕಳಲ್ಲದವಳ ಹೆರಿಗೆಯನ್ನು ಈ ಬ್ರಾಹ್ಮಣ ಮಾಡಿಸುತ್ತಿದ್ದಾನಲ್ಲ, ಮಡಿ-ಮೈಲಿಗೆಗಳಿಲ್ಲವೇ? ಎಂದು ಟೀಕಿಸುವ ಜನರಿಗೆ, ತಾವು-ತಮ್ಮ ಪತ್ನಿ ಪಾರ್ವತಿಬಾಯಿ ಎಷ್ಟು ಕರುಣಾಮಯಿಗಳು ಎಂಬುವನ್ನು ಅವರು ಸಹಾಯದ ಆಚರಣೆಯಲ್ಲಿ ತೋರಿದರು.

ಶಂ. ಬಾ. ದೇವರ ಗುಡಿಗಳಿಗೆ ಹೋಗುವುದಿಲ್ಲ! ಕೈ ಮುಗಿಯುವುದಿಲ್ಲ! ಎಂಬ ಟೀಕೆಗಳು ಮೇಲಿಂದ ಮೇಲೆ ಅವರನ್ನು ಪೀಡಿಸಲಾರಂಭಿಸಿದವು. ಅವರು ಅಂತಹ

ಜನರಿಗೆ ' ಮೂರ್ತಿಯಲ್ಲಿ ದೇವರಿದ್ದಾನೇನು?' ಎಂಬುದಾಗಿ ಕೇಳಿ, ಶಕ್ಯವಾದರೆ ನನಗೆ ದಯಮಾಡಿ ತೋರಿಸುವಿರಾ? ಇಲ್ಲದಿದ್ದರೆ ನನ್ನನ್ನೇಕೆ ಪೀಡಿಸುವಿರಿ ಎಂದು ಕಠೋರವಾಗಿ ನುಡಿದ ಪ್ರಸಂಗಗಳು ಹಲವಾರು. ಒಮ್ಮೆ ಅವರ ಆತ್ಮೀಯ ಮಿತ್ರರೆನ್ನುವವರು 'ಎಲೋ ಶಂಬಾ ನೀನು ಬಂದು ಕಡೆಗೆ ಗುಡಿಗೆ ಹೋದ ಸುಳಿವು ಸಿಕ್ಕಿದೆ. ಇದಕ್ಕೇನು ಹೇಳುವೆ?' ಎಂದು ಪ್ರಶ್ನಿಸಿದರು. "ಹೌದು ನಾನು ಒಂದಲ್ಲ, ಅನೇಕ ಅಪರಿಚಿತ ಗುಡಿಗಳನ್ನು ನಿರೀಕ್ಷಿಸಿದ್ದೇನೆ. ಗುಡಿಯ ಒಳಗೂ-ಹೊರಗೂ ಯಾಕೆ ಗೊತ್ತೆ? ನಮ್ಮ ನಾಡಿನ ಜನರ ಇತಿಹಾಸ-ಸಂಸ್ಕೃತಿ ಇಲ್ಲಿ ಏನೇನು ಮಾಡಿದೆ ಎಂಬ ಸಾಕ್ಷಿಗಳನ್ನು ಅರಿಯಲು ಮಾತ್ರ." ಇದಕ್ಕೇನು ಅನ್ನುತ್ತಿ? ಎಂದು ಶಂಬಾ ಕೇಳಿದಾಗ, ಆತ್ಮೀಯ ಮಿತ್ರರು ತಮಗೆ ಗೊತ್ತಿಲ್ಲದೆ ಕೈಮುಗಿದು ಕ್ಷಮೆ ಕೇಳಿದರಂತೆ.

ಶಂಬಾ ಜೋಶಿ ಅವರು ಮಾನವ ಭೂಮಿಯ ಮೇಲೆ ಮಾನವನಾಗಿ ಬದುಕಬೇಕೆಂಬ ಸುಮಾರ್ಗದ ನುಡಾವಳಿ-ನಡಾವಳಿಗಳನ್ನು ಆಳವಾಗಿ ವಿಚಾರಿಸುತ್ತ ಎಲ್ಲಿ ತಪ್ಪುತ್ತಿದೆ ಎಂಬುದನ್ನು ಬೆರಳಿಟ್ಟು ತೋರಿಸುತ್ತ ಬಂದಿದ್ದಾರೆ.

ಮಾನವ ಧರ್ಮ ಬೆಳೆದರೆ ಮಾತ್ರ ಜನ ಒಬ್ಬರನ್ನೊಬ್ಬರು ಅರಿಯಲು ಸಾಧ್ಯ. ಜಗತ್ತು, ನೆಮ್ಮದಿ-ಶಾಂತಿಯಿಂದ ಮುಂದುವರೆಯಬಹುದಾಗಿದೆ. ನನ್ನ ಕಾರ್ಯದಲ್ಲಿ ತಪ್ಪಿದ್ದರೆ ತಿಳಿಸಿ ಹೇಳಿರೆಂದು ಶಂಬಾ ವಿನಂತಿಸಿಕೊಳ್ಳುತ್ತಿದ್ದುದು ಪದೇ ಪದೇ ನೆನಪಿಗೆ ಬರುವುದು.

ಮರೆತು ಹೋಗುತ್ತಿರುವ ಮಾನವ ಧರ್ಮದ ಪುನರುತ್ಥಾನಕ್ಕಾಗಿ, ಮಾನವ ಧರ್ಮ ಪ್ರತಿಷ್ಠಾನದ ಸ್ಥಾಪನೆಯಲ್ಲಿ ಶಂಬಾ ಅವರೊಂದಿಗೆ ಕೈ ಜೋಡಿಸುವ ಸದವಕಾಶ ಪಡೆದ ನಾನು ಧನ್ಯ.

❖ ❖ ❖

(2) ಡಾ. ಶಂಬಾ ಜೋಶಿ ಅವರ ಜೀವನ ನಿಷ್ಠೆ

ಕನ್ನಡ ಸಾಹಿತ್ಯ, ಸಂಸ್ಕೃತಿ, ಸಂಶೋಧನೆಗಳಲ್ಲಿ ಕೆಲಸಮಾಡಿ ಮಾನವತಾವಾದಿ ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ಹಾಗೂ ತಮ್ಮ ಬದುಕಿನಲ್ಲಿ ತೋರಿಸಿಕೊಟ್ಟ ಸರಳ ವ್ಯಕ್ತಿ ಡಾ. ಶಂಕರಬಾಳ ದೀಕ್ಷಿತ್ ಜೋಶಿ.

೧೮೯೬ರ ಜನವರಿ ೪ ರಂದು ಜನಸಿದ ಇವರು ಪ್ರಾಥಮಿಕ ಏಳನೆಯ ತರಗತಿಯವರೆಗೆ ಓದಿದರು. ಶಿಕ್ಷಕ ತರಬೇತಿ ಮುಗಿಸಿ ಪ್ರಾಥಮಿಕ ಶಿಕ್ಷಕರಾದರು. ಶ್ರದ್ಧೆಯಿಂದ ಜೀವನ ಸಾಗಿಸುತ್ತ, ನಾನು ಯಾರು? ನನ್ನ ಕೆಲಸಗಳೇನು? ಎಂಬ ಅರ್ಥಗ್ರಹಣವನ್ನು ತಾವೇ ಶ್ರದ್ಧಾಪೂರ್ವಕವಾಗಿ ವಿಚಾರಿಸಿ, ಬದುಕಿನುದ್ದಕ್ಕೂ ತೋರಿಸಿಕೊಟ್ಟ ಕನ್ನಡ ಸಾಹಿತ್ಯದ ಅಪೂರ್ವ ವ್ಯಕ್ತಿ ಡಾ. ಶಂಬಾ ಜೋಶಿ.

ಸಂಸ್ಕೃತ ಇಂಗ್ಲೀಷ್ ಭಾಷೆಗಳನ್ನು ಸ್ವಯಂ ಕಲಿತವರು. ಸಂಸ್ಕೃತ ಸಾಹಿತ್ಯಕ್ಕೆ ಮೂಲ ಆಕರವಾದ ಋಗ್ವೇದವನ್ನು ಆಳವಾಗಿ ತಿಳಿದವರು. ಅಲ್ಲಿಯ ನಿನ್ನೆ-ಇಂದು-ನಾಳೆಗಳ (ತ್ರಿಕಾಲ) ಸತ್ಯದ ಬಗೆಗೆ ತಿಳಿದು ಚಿಂತನ-ಮಂಥನಕ್ಕೆ ಇಳಿದವರು. ಸತ್ಯವಾದುದನ್ನು ತಮ್ಮ ಜೀವನದಲ್ಲಿ ಆಚರಣೆಗಳಿಂದ ತೋರುತ್ತಾ ಕಠೋರ ಟೀಕೆಗಳನ್ನು ಎದುರಿಸುತ್ತ ಸಾಗಿದರು. ಕನ್ನಡ ಸಾಹಿತ್ಯಕ್ಕೆ ಹೊಸ ಹೊಸ ಆಯಾಮಗಳನ್ನು ನೀಡಿದರು. ತಮ್ಮ ಅನ್ವೇಷಣೆಯಲ್ಲಿ ಕನ್ನಡ ನಾಡು, ನುಡಿ, ಸಂಸ್ಕೃತಿಗಳ ಹರವು ತೋರಿದರು. ಭಾರತೀಯ ಸಂಸತಿ, ಇತಿಹಾಸದ ಸಂಶೋಧನೆ, ವರ್ತಮಾನ ಸಮಾಜದ ನಡತೆ, ಮಾನವೀಯತೆ, ಧಾರ್ಮಿಕ ಚಿಂತನೆಗಳ ವೈಚಾರಿಕ ಆ ಕೃತಿಗಳನ್ನು ಭಾರತೀಯ ವಿದ್ವತ್ ಜಗತ್ತಿಗೆ ತೋರಿಸಿಕೊಟ್ಟರು ಶಂಬಾ.

ಡಾ. ಶಂಬಾ ಅವರು ವಿನಯಶೀಲರಾಗಿದ್ದರು. ಸತ್ಯದ ಆಚರಣೆಗೆ ಮನಸ್ಸು ಹಿಗ್ಗಿಸುತ್ತಿದ್ದರು. ಆದರೆ ಸತ್ಯದ ಆಚರಣೆಯಂತೆ-ನಟಿಸುತ್ತಿರುವವರನ್ನು ಸೇರುತ್ತಿರಲಿಲ್ಲ. ನಯವಿನಯಗಳು ಮನುಷ್ಯರ ಬಾಳಿಗೆ ಅವಶ್ಯಬೇಕಾದ-ಬೇಕಾಗಿರುವ ಸಂಸ್ಕೃತಿಯ ಎಳೆಗಳು. ಅವು ಮಾನವನನ್ನು ಮುಂದಕ್ಕೆ ಒಯ್ಯುವವು. ಹಲವರ ಪ್ರೀತಿಗೆ ಪಾತ್ರರನ್ನಾಗಿ ಮಾಡುವವು. ನಯ-ವಿನಯ ಇಲ್ಲದವರು ಸುಸಂಸ್ಕೃತರೇ ಅಲ್ಲ. ಸಂಸ್ಕೃತಿಯನ್ನು ಆಚರಿಸಲು ನಯ ಶ್ರದ್ಧಾಪೂರ್ವಕವಾಗಿ ಇರಬೇಕಾದುದು. ಇದರಿಂದ ಹಾನಿ ಕಡಿಮೆ, ಲಾಭವೇ ಹೆಚ್ಚು. ಮಾನ ಕೊಡುವವರೇ ಮಾನ ಪಡೆಯುತ್ತಾರೆ-ಎಂಬುದು ಜಗದ ನೀತಿ. ಈ ಜಗತ್ ನೀತಿಯನ್ನು ಗಂಭೀರವಾಗಿ 'ತಿಳಿಯಬೇಕು'-ಎಂಬುದು ಜಗತ್ ನೀತಿ. ಅನೇಕ ಘಟನೆಗಳ ಮೂಲಕ, ಕಥೆಗಳ ಮೂಲಕ, ನಡಾವಳಿ-ನುಡಾವಳಿ ಮೂಲಕ ಶಂಬಾ ಸಿದ್ಧಪಡಿಸುತ್ತಿದ್ದರು.

---

* 22-4-2000 ರಂದು ಮಾಡಿದ ಶಂಬಾದತ್ತಿ ಉಪನ್ಯಾಸ.

ಒಬ್ಬ ಕನ್ನಡ ಶಾಲೆಯ ಶಿಕ್ಷಕ ಕನ್ನಡ ಸಾರಸ್ವತ ಲೋಕದಲ್ಲಿ ಸೈ ಎನಿಸಿಕೊಳ್ಳುವ ಕಾರ್ಯವನ್ನು ಮಾಡಿ, ಜೀವನದುದ್ದಕ್ಕೂ ಸತ್ಯಶ್ರದ್ಧೆಯನ್ನು ಆಚರಿಸುತ್ತಾ ಬಂದುದು ಸಮಾನ್ಯ ಸಂಗತಿಯಲ್ಲ. ಆತ್ಮ ಪ್ರಜ್ಞೆಯನ್ನು ಹೊಂದಿದ ಶಂಬಾ ಅವರು ತಮ್ಮ ಕೆಲಸಗಳಿಗಾಗಿ ಯಾರಿಗೂ 'ಜೀಯಾ....ಹೌದಪ' ಎನ್ನಲಿಲ್ಲ. ಸತ್ಯದ ಆಚರಣೆ ಇದೇ ಎಂದು ತಿಳಿದಾಗ ಸಹಜವಾಗಿ ಅವರ ಎರಡು ಕೈಗಳು ಹೃದಯದ ಮೇಲೆ ಕಾಣಿಸಿಕೊಂಡು ಹಾಗೇ ಕ್ಷಣಹೊತ್ತು ನಿಲ್ಲುತ್ತಿದ್ದವು.

ಶಂಬಾ ಪ್ರಾಥಮಿಕ ಶಿಕ್ಷಕ ವೃತ್ತಿಯನ್ನು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ, ಸವದತ್ತಿ ತಾಲ್ಲೂಕಿನ (ಪರಸಗಡ ತಾ.) ಉಗರಗೊಳ್ಳ (ಉಗ್ರಗೊಳ್ಳ)ದಲ್ಲಿ ಮುಗಿಸಿ ಬಳಿಕ ಧಾರವಾಡದಲ್ಲಿ ಬಂದು ನೆಲೆನಿಲ್ಲುವ ಮನಸ್ಸು ಮಾಡಿದರು. ತಾವು ಕಾರ್ಯ ಮಾಡುವ ಎಡೆ ಧಾರವಾಡ ಎಂದು ಖಚಿತ ಮಾಡಿಕೊಂಡರು. ಸಾಹಿತ್ಯ ಕೃಷಿ ಸುರುಮಾಡಿ ಮೊದಲು 'ಕರ್ನಾಟಕ ಮಿತ್ರ' ಪತ್ರಿಕೆಯಲ್ಲಿ ದುಡಿದರು. ಬಳಿಕ ಜೈ ಕರ್ನಾಟಕದಲ್ಲಿ ಲೇಖನಗಳನ್ನು ಪ್ರಸಿದ್ಧಿ ಪಡೆಯಿಸಿದರು. ಸೌಂದರ್ಯ ವಿಚಾರ ಹೊಳೆದುದ್ದು ಆಗಲೇ ಏನೋ ಎಂಬುದನ್ನು ಒಮ್ಮೆ ತಿಳಿಸಿದರು. ಸೌಂದರ್ಯ ವಿಚಾರಕ್ಕೆ ಆಲೂರು ವೆಂಕಟರಾಯರನ್ನು ನೆನೆದುದುಂಟು. ಧಾರವಾಡದಲ್ಲಿ ಗೆಳೆಯರ ಗುಂಪು ಆಗಲೇ ಪ್ರಾರಂಭವಾಗಿತ್ತು. ಆ ಗುಂಪಿಗೆ ವರಕವಿ ದ.ರಾ. ಬೇಂದ್ರೆಯವರೇ ಕೇಂದ್ರ ಬಿಂದುವಾಗಿದ್ದರು. ಗೆಳೆಯರ ಗುಂಪು ಕಂಡ ಕನಸು ಒಳ್ಳೆಯದು. ಕರ್ನಾಟಕ ಪುನರುಜ್ಜೀವನ ಆ ಕನಸಿನಲ್ಲಿತ್ತು. ಅದು ನನಸಗಾಬೇಕು, ಎಂಬ ಶ್ರದ್ಧೆಯ ದುಡಿಮೆಯ ಬಗೆಗೆ ಶಂಬಾ ಸದಾ ತಿಳಿವಳಿಕೆ ನೀಡುತ್ತಿದ್ದರು.

<u>ಮಾನವತಾವಾದಿ</u>

ಶಂಬಾ ಅವರು ಜಾತಿಯ ವಿಚಾರದಲ್ಲಿ ಮಾನವತಾವಾದಿಯಾಗಿದ್ದರು. ಮಾನವರೆಲ್ಲ ಒಂದೇ ಎಂದು ಬಾಲ್ಯದಲ್ಲಿಯೇ ಮಾತನಾಡತೊಡಗಿದರು. ಅದನ್ನೇ ಜೀವನದಲ್ಲಿ-ಸಾಹಿತ್ಯದಲ್ಲಿ ಆಚರಿಸಿ ತೋರಿದರು. ಕೆಲವು ಬ್ರಾಹ್ಮಣರು ಶಂಬಾ ಅವರನ್ನು ಇವನೊಬ್ಬ ವಿಚಿತ್ರ ಬ್ರಾಹ್ಮಣನೆಂದು ಕರೆದರು. ಅನ್ಯ ಮಹಿಳೆಯೊಬ್ಬಳ ಹೆರಿಗೆ ಅವರ ಮನೆಯಲ್ಲಾಯಿತು. ಈ ಬ್ರಾಹ್ಮಣನಿಗೆ ಮಡಿ ಮೈಲಿಗೆಗಳಿಲ್ಲವೆ? ಎಂದು ಟೀಕಿಸುವ ಜನರಿಗೆ, ತಾವು ತಮ್ಮ ಪತ್ನಿ ಪಾರ್ವತಿಬಾಯಿ ಎಷ್ಟು ಕರುಣಾಮಯಿ ಎಂಬುದನ್ನು ಅವರು ಆಚರಣೆಯಲ್ಲಿ ತೋರಿದರು.

ಶಂಬಾ ದೇವರ ಗುಡಿಗೆ ಹೋಗುವುದಿಲ್ಲ. ಕೈ ಮುಗಿಯುವುದಿಲ್ಲ ಎಂಬ ಟೀಕೆಗಳು ಮೇಲಿಂದ ಮೇಲೆ, ಅವರನ್ನು ಪೀಡಿಸಲಾರಂಭಿಸಿದವು. ಅವರು ಅಂತಹ ಜನರಿಗೆ 'ಮೂರ್ತಿಯಲ್ಲಿ ದೇವರಿದ್ದಾನೇನು? ಎಂದು ಕೇಳಿ ನನಗೆ ದಯಮಾಡಿ ತೋರಿಸುವುರಾ? ಇಲ್ಲದಿದ್ದರೆ ನನ್ನನ್ನೇಕೆ ಪೀಡಿಸುವಿರಿ? ಎಂದು ಕಠೋರವಾಗಿ ನುಡಿದ ಪ್ರಸಂಗಗಳು ಹಲವಾರು. ಒಮ್ಮೆ ಅವರ ಆತ್ಮೀಯ ಮಿತ್ರ ಎನ್ನುವವರು 'ಎಲ್ಲೋ ಶಂಬಾ ನೀನು ಒಂದು ಕಡೆ ಗುಡಿಗೆ ಹೋದ ಸುಳಿವು ಸಿಕ್ಕಿದೆ, ಇದಕ್ಕೇನು ಹೇಳುವೆ? ಎಂದು ಪ್ರಶ್ನಿಸಿದರು.

ಹೌದು, ನಾನು ಒಂದಲ್ಲ ಅನೇಕ ಗುಡಿಗಳನ್ನು ನೋಡಿದ್ದೇನೆ. ಗುಡಿಯ ಒಳಗೂ-ಹೊರಗೂ ಯಾಕೆ ಗೊತ್ತೆ? ನಮ್ಮ ನಾಡಿನ ಜನರ ಇತಿಹಾಸ, ಸಂಸ್ಕೃತಿಗಳು ಇಲ್ಲಿ ಹೇಗೆ ಮೂಡಿವೆ ಎಂಬ ಸಾಕ್ಷಿಗಳನ್ನು ಅರಿಯಲು ಮಾತ್ರ' ಎಂದರಂತೆ. ಕೇಳಿದ ಮಹಾಶಯ ಅವರಿಗೆ ಕೈಮುಗಿದು ಕ್ಷಮೆಯಾಚಿಸಿದನಂತೆ. ಇದನ್ನು ಎಂ. ಜೀವನಾ ಅವರು ಪ್ರಪಂಚ ಪತ್ರಿಕೆಗೆ ಶಂಬಾ ಅವರನ್ನು ಕುರಿತು ಬರೆಯಲು ಭೆಟ್ಟಿಗೆ ಬಂದಾಗ ಸ್ಪಷ್ಟಪಡಿಸಿದರು.

ಮಡಿಕೇರಿಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಡಾ. ಶಂಬಾ ಅವರ ಪಾಲಿಗೆ ಬಂದಿತ್ತು. ಶಂಬಾ ಜೋಶಿ ಅವರು ಸಂಸ್ಕೃತಿಯ ಆಳ ತಿಳಿಯಲು ಗುಡಿಯ ಸಂಸ್ಕೃತಿ, ದೇವತಾ ಹೆಸರುಗಳು, ಮೂರ್ತಿಗಳು, ವ್ಯಂಗ್ಯ ಚಿತ್ರಗಳು, ಜಾನಪದ ಹಾಡುಗಳು, ಗಾದೆಯ ಮಾತುಗಳು, ನಡೆ-ನುಡಿಗಳು, ಇತ್ಯಾದಿ ಇತ್ಯಾದಿಯಾಗಿ ಬಳಸುತ್ತಿದ್ದರು. ಈ ತರಹದ ಬರಹಗಳು 'ಹಾಲುಮತ ದರ್ಶನ'ದ ಗ್ರಂಥದಿಂದ ಅವರ ಮುಂದಿನ ಸಂಶೋಧನಾ ಕೃತಿಗಳಲ್ಲಿ ಹಾಸು-ಹೊಕ್ಕಾಗಿರುವುದನ್ನು ಕಾಣಬಹುದು.

ಶಂಬಾ ಅವರ ದೃಷ್ಟಿಯಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆ ಈ ಶಬ್ದಗಳ ಅರ್ಥ ಒಂದೇ ಎಂದು ಮೇಲಿನ ನೋಟಕ್ಕೆ ಕಾಣುತ್ತದೆ. ಗುರುಗಳಲ್ಲಿರಬೇಕಾದದ್ದು, ಹಿರಿಯರಲ್ಲಿರಬೇಕಾದದ್ದು, ರಾಷ್ಟ್ರಕ್ಕೆ ಇರಬೇಕಾದದ್ದು ಭಕ್ತಿಯೇನೋ ನಿಜ. ಆದರೆ ಶ್ರದ್ಧೆ ನಿಷ್ಠೆಗಳು ಭಕ್ತಿಗಿಂತ ಹೆಚ್ಚಿನ ಹಿರಿಮೆಯನ್ನು ಆಚರಣೆಯಲ್ಲಿ ಪಡೆದುಕೊಂಡಿವೆ ಎಂದು ಹೇಳುತ್ತಿದ್ದರು. ತಾವು ಸತ್ಯದ ಆಚರಣೆಯಲ್ಲಿ ಒಮ್ಮೆ ಶ್ರದ್ಧೆ ಎಂಬುದಾಗಿ, ಇನ್ನೊಮ್ಮೆ ನಿಷ್ಠೆ ಎಂಬುದಾಗಿ ಬರೆಯುತ್ತಿದ್ದುದನ್ನು ನೆನಪಿಸಿ ಹೇಳುತ್ತಿದ್ದರು. ನೀನು ಅಪ್ಪನ ಮಗನೊ? ಅವ್ವನ ಮಗನೊ? ಎಂದು ಪ್ರಶ್ನಿಸಿ ಕೇಳಿದಂತೆ-ಈ ಶಬ್ದಗಳ ಸೃಷ್ಟಿಯಾದಂತಿದೆಯೆಂಬ ಮನೋಭಾವ ತೋರುತ್ತಿದ್ದರು.

ದೇಶದ ರಾಜಕೀಯ ರಂಗದಲ್ಲಿ ನಡೆದ ಅಹಿತಕರ ಘಟನೆಗಳ ಬಗೆಗೆ ನೊಂದುಕೊಳ್ಳುತ್ತಿದ್ದರು. ಪ್ರಜಾಪ್ರಭುತ್ವ ಒಳ್ಳೆಯದ್ದಾಗಿದೆ. ವಿಶ್ವದ ಆಡಳಿತ ಪದ್ಧತಿಗಳಲ್ಲಿ ಇದು ಆದರ್ಶಪ್ರಾಯ. ಆದರೆ ಇದರಲ್ಲಿ ಆಡಳಿತಗಾರರು ಸತ್ಯನಿಷ್ಠುರರಾಗಿರಬೇಕು. ತಮ್ಮಿಂದ ತಪ್ಪಾಗಬಾರದೆಂಬ ಎಚ್ಚರಿಕೆ ಇರಬೇಕು. ತಮ್ಮ ಆಡಳಿತದಲ್ಲಿ ಸತ್ಯದ ಶ್ರದ್ಧೆ ಇರಬೇಕು. ಅಲ್ಲದೆ ಅದೇ ಮುಖ್ಯವಾಗಿಯೂ ಇರಬೇಕು. ಯಾವುದೇ ಪಕ್ಷವಾಗಲಿ ಅವಗುಣದ ಹಾದಿ ಹಿಡಿಯಬಾರದು. ಜನಕಲ್ಯಾಣ ಸಾಧ್ಯವಾಗುವುದು, ಆಡಳಿತದಲ್ಲಿ ನಿಷ್ಠೆ ತೋರಿದಾಗ ವಿವೇಕ ಇರಲೇಬೇಕು ಎಂಬ ವಿಚಾರಗಳ ರಾಜಕೀಯ ಜನರಿಗೆ ಮಾರ್ಗದರ್ಶನವಾಗಿರುತ್ತಿದ್ದವು.

ಶಂಬಾರವರ ಇನ್ನೊಂದು ಹೇಳಿಕೆಯನ್ನು ಇಲ್ಲಿ ನೋಡೋಣ. 'ಪೂರ್ಣತೆಯ ಆದರ್ಶದಲ್ಲಿ ಶ್ರದ್ಧೆಯಿಂದ ದೃಷ್ಟಿಯನ್ನು ಸ್ಥಿರಗೊಳಿಸಿ, ತನ್ನ ಅನುದಿನದ ನಡವಳಿಕೆಯಲ್ಲಿ

ಅಪೂರ್ಣತೆಯ ಅರಿವು ಇರುವಲ್ಲಿಯೇ ಮಾನವರ ಕ್ಷೇಮವಿದೆ. ಅಪೂರ್ಣತೆಯ ಮೂಲಕವಾಗಿಯೇ ಈ ಲೋಕದ ಎಲ್ಲ ವಸ್ತುಗಳು ಒಂದಕ್ಕೊಂದು ಪೂರಕವಾಗಿ ಪೋಷಕವಾಗಿ ಇರಬಲ್ಲವು. (ಸಮಾಜ ದರ್ಶನ) ಹಾಗೇ ಮಾನವ ವಿಕಾಸದ ಬಗೆಗೆ ತನ್ನ ಅರಿವನ್ನೇ ಗುರುವಾಗಿ ಇಟ್ಟುಕೊಂಡು ಲೋಕಕಲ್ಯಾಣದ ದಾರಿಯಲ್ಲಿ, ಅಂದರೆ ಸತ್ ಮಾರ್ಗದಲ್ಲಿ ಬೆಳಕಿನಿಂದ ಬೆಳಕಿಗೆ ಸಾಗುತ್ತ ಮುನ್ನಡೆವಲ್ಲಿಯೆ ಮಾನವ ಸಮಾಜದ ವಿಕಾಸವಿದೆ ಎಂಬ ವಿವರ ನೀಡಿದ್ದಾರೆ.

ಶಂಬಾ ಜೋಶಿ ಅವರು ಮಾನವ ಭೂಮಿಯ ಮೇಲೆ ಮಾನವನಾಗಿ ಬದುಕಬೇಕೆಂಬ ಸುಮಾರ್ಗದ ನಡಾವಳಿ-ನಡಾವಳಿಗಳನ್ನು ಆಳವಾಗಿ ವಿಚಾರಿಸುತ್ತ ಎಲ್ಲಿ ತಪ್ಪುತ್ತಿದೆ ಎಂಬುದನ್ನು ಸುಮಾರು ನಲ್ವತ್ತು ಸಾಹಿತ್ಯ-ಸಂಶೋಧನಾ ಕೃತಿಗಳನ್ನು (ಅನುವಾದ ಹಾಗೂ ಒಂದು ಮರಾಠಿ ಕೃತಿ ಸೇರಿ) ರಚಿಸಿದ್ದಾರೆ. 'ಸನಾತನ ಧರ್ಮ' ಎಂಬ ಕೃತಿಯ ಪ್ರತಿಯು ದೊರಕಬೇಕಾಗಿದೆ. ಅವರು ಕೆಲವು ಕವಿತೆಗಳನ್ನು ಬರೆದ ಸೂಚನೆಗಳಿವೆ. (ಎಲ್.ಎಸ್. ಶಾಸ್ತ್ರೀಜಿ, ಬೆಳಗಾವಿ ಇವರ ಹೇಳಿಕೆ.) ಅವು ದೊರಕಿಲ್ಲ.

'ಸೌಂದರ್ಯ ವಿಚಾರ' ಕೃತಿ ಸರ್ವರಿಗೂ ವಿಚಾರ ಮಾಡಲು ಹಚ್ಚಿದ ಕೃತಿ. ಹಾಗೆ 'ಅಸಂತೋಷವೇ ಏಳ್ಗೆಯ ಮೂಲ' ಎಂಬ ಕೃತಿ ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ ಭಾಗ-1 ಮತ್ತು ಭಾಗ-2 (ಈ ಕೃತಿಗೆ ಕೇಂದ್ರ ಸಾಹಿತ್ಯ ಪುರಸ್ಕಾರ ದೊರಕಿದೆ) ಋಗ್ವೇದ ಸಾರ; ನಾಗಪ್ರತಿಮಾ ವಿಚಾರ ಅವರಿಗೆ ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (ಡಿ.ಲಿಟ್.) ದೊರಕಿದ ಕೃತಿ. 'ಪ್ರವಾಹ ಪತಿತರ ಕರ್ಮ, ಹಿಂದೂ ಎಂಬ ಧರ್ಮ', 'ವೈವಸ್ವತ ಮನುಪ್ರಣೀತ ಮಾನವ ಧರ್ಮದ ಆಕೃತಿ' ಮತ್ತು 'ಬಿತ್ತಿದ್ದನ್ನು ಬೆಳೆದುಕೋ' ಡಾ ಶಂಬಾ ಜೋಶಿ ಪಾಂಡಿತ್ಯವನ್ನು ತೆರೆದು ತೋರಿಸುವ, ಸೂಚಿಸುವ ಕೃತಿಗಳಾಗಿವೆ. ಮಾನವ ಧರ್ಮ ಬೆಳೆದರೆ ಮಾತ್ರ ಜನ ಒಬ್ಬರನ್ನು ಇನ್ನೊಬ್ಬರು ಅರ್ಥ ಮಾಡಿಕೊಳ್ಳಲು ಅರಿತುಕೊಳ್ಳಲು ಸಾಧ್ಯ. ಇದರಿಂದಾಗಿಯೇ ಜಗತ್ತು ಶಾಂತಿ ಮತ್ತು ನೆಮ್ಮದಿಯಿಂದ ಮುಂದುವರೆಯಬಹುದಾಗಿದೆ. ನನ್ನ ಕಾರ್ಯದಲ್ಲಿ ತಪ್ಪಿದ್ದರೆ, ತಿಳಿಸಿ ಹೇಳಿ ಎಂದು ಶಂಬಾ ಅವರು ವಿನಂತಿಸಿಕೊಳ್ಳುತ್ತಿದ್ದರು. ಅವರ ಈ ವಿನಯದ ಮಾತು ಪದೇ ಪದೇ ನೆನಪಿಗೆ ಬರುತ್ತಿದೆ. ಅವರ ಪ್ರಜ್ಞಾಯುಕ್ತವಾದ ಹೇಳಿಕೆಗಳು ಸಾಲುಗಟ್ಟಿ ಕಣ್ಮುಂದೆ ನಿಲ್ಲುತ್ತದೆ.

ನಮ್ಮ ಒಂದು ಕವಿತೆಯಲ್ಲಿ ಬಂದಿರುವ 'ನೀನಾರಿಗಾದೆಯೋ ಎಲೆ ಮಾನವ' ಎಂಬ ಪಲ್ಲವಿಯು ಅತ್ಯಂತ ಅರ್ಥಗರ್ಭಿತವಾದದ್ದು. ಇದರಲ್ಲಿ ನನ್ನನ್ನು ಅಂತರ್ಮುಖಿಯಾಗಿಸುವ ಸಾಮರ್ಥ್ಯವಿದೆ. ಮಾನವನು ಮರಳಿ ನರನಾಗಿದ್ದಾನೆ ಎಂಬ ನಿಷ್ಕರ್ಷವನ್ನು ಗೋಮುಖದಿಂದ ಬಂದ ಈ ಉಕ್ತಿ ಬೆಂಬಲಿಸುತ್ತದೆ. ಇಂದು ಬೆಳ್ಳಿ, ಬಂಗಾರ, ವಜ್ರ ಮೊದಲಾದ ಉತ್ಸವಗಳನ್ನು ಏರ್ಪಡಿಸುವ ಈ ಪ್ರಸಂಗಗಳಲ್ಲಿ ನಮ್ಮ ಸಾಧನೆಗಳ ಸಿಂಹಾವಲೋಕನವೂ ಅನಿವಾರ್ಯ, ನಮ್ಮ ಪ್ರಗತಿಯಾಗಿದೆ ಎಂಬ ಭ್ರಮೆ

ಹುಟ್ಟಿಸುವ ಮಾತುಗಳು ಕೇಳಿಬರುತ್ತಿವೆ. ಆದರೆ ವಸ್ತುಸ್ಥಿತಿಯು ಇಂತಹ ಮಾತಿಗೆ ಹೊಂದಾಣಿಕೆಯಾಗದು' (ಬಿತ್ತಿದ್ದನ್ನು ಬೆಳೆದುಕೋ).

ಶಂಬಾ ಗಂಭೀರ ಮನಸ್ಸಿನವರು. ಸೂರ್ಯನ ಸತ್ಯವನ್ನು ಒಪ್ಪಿದವರು. ಮಾನವನ ಬಾಳಿಗೆ ಪ್ರಕಾಶ ಅಗತ್ಯ ಎಂಬುದನ್ನು ತೋರಿದವರು. ಪರಮಗುರಿ ಸಾಧನೆಯೇ ಹೋರಾಟ ಎಂಬುದನ್ನು ತಿಳಿದವರು. ಪ್ರಸಿದ್ಧ ಚಿಂತಕ, ಸಂಶೋಧಕ, ಮಾನವತಾವಾದಿ ಇತ್ಯಾದಿ ಹೆಸರು ಗಳಿಸಿದ ಶಂಬಾ ಬರೆದಂತೆ ಬದುಕಿದರು.

ಈ ಅಪ್ರತಿಮ ವಿದ್ವಾಂಸ ೧೯೯೧ರ ಸೆ. ೨೮ ರಂದು ಧಾರವಾಡದ ಸಾಧನ ಕೇರಿಯಲ್ಲಿ ಇಹಲೋಕವನ್ನು ತ್ಯಜಿಸಿದರು. ಅಚ್ಚರಿಯ ಸಂಗತಿಯೆಂದರೆ ಅವರ ಪತ್ನಿ ಪಾರ್ವತಿಬಾಯಿಯವರು ಇವರಿಗಿಂತ ಐದಾರು ತಾಸು ಮೊದಲು ತೀರಿಕೊಂಡದ್ದು. ಇಬ್ಬರ ಅಂತ್ಯಕ್ರಿಯೆಯೂ ಏಕಕಾಲಕ್ಕೆ ಆಯಿತು.

ಶಂಬಾ ಸಮೂಹ ಸೃಷ್ಟಿಗೆ ಅದರಲ್ಲೂ ಪ್ರಜಾವಂತ ಸಮೂಹಕ್ಕೆ ತಲೆ ಬಾಗುತ್ತೇನೆಂದು ಹೇಳುತ್ತಿದ್ದರು.

ಕೆಲವೊಂದು ವೇಳೆ ಸಮೂಹ ಅರೆಪ್ರಜ್ಞೆಯವರಾದರೆ, 'ಜನಮರುಳೋ ಜಾತ್ರೆ ಮರುಳೋ....ಶಂಭುಲಿಂಗ' ಎಂಬ ಹಾದಿಯನ್ನು ಹಿಡಿಯುತ್ತದೆ ಎಂದವರು ಎಚ್ಚರಿಸುತ್ತಿದ್ದರು.

ಇಡಿಯಾಗಿ ಶಂಬಾ ಅವರ ಸಾಹಿತ್ಯ ಕೃತಿಗಳು ಮೂರು ಬಗೆಯ ಸಂಸ್ಕೃತಿಯನ್ನು ವಿವರಿಸಿವೆ ಎಂಬ ವಿಮರ್ಶೆ ಮೇಲಿಂದ ಮೇಲೆ ಪ್ರಕಟವಾಗುತ್ತಿತ್ತು. ಒಂದು ಕರ್ನಾಟಕ ಸಂಸ್ಕೃತಿ, ಎರಡು ಭಾರತೀಯ ಸಂಸ್ಕೃತಿ ಮತ್ತು ಮೂರನೆಯದಾಗಿ ಮಾನವ ಸಂಸ್ಕೃತಿ ಎಂಬುದಾಗಿ ವಿವರಗಳು ಕೇಳಿಬಂದಿವೆ.

ಶಂಬಾ ಅವರು ಈ ಸಂಸ್ಕೃತಿಯ ಹೊಳವಿನಲ್ಲಿ ನಾಡು, ನುಡಿ, ರಾಜ್ಯ, ದೇಶ, ಜಗತ್ತು ಜೀವನ-ಬಾಳು-ಬದುಕು, ಮನವತಾವಾದ, ಬೆಳಕೇ ದೇವರು, (ದೇವರ ಬಗೆಗೆ), ಸಮಾಜ ದರ್ಶನ, ಅರ್ಥಗ್ರಹಣ ಪದ್ಧತಿ ಇತ್ಯಾದಿ ಇತ್ಯಾದಿ ಸಹಸ್ರಾರು ಪ್ರಕಾಶ ಕಿರಣಗಳನ್ನು ಕನ್ನಡ- ಮರಾಠಿ ಸಾಹಿತ್ಯದಲ್ಲಿ ಮೂಡಿಸಿದ್ದಾರೆ. ಬರಬರುತ್ತಾ ಸಂಶೋಧಕರಿಗೆ-ನಿಜಮಾನವರಿಗೆ ಅವರ ಕೃತಿಗಳು ಮಾರ್ಗದರ್ಶಿಯಾಗಿ ನಿಲ್ಲುತ್ತವೆ. ಅವರ ನಿಷ್ಠುರ ಸಾಹಿತ್ಯ ಬೆಳೆಯುತ್ತದೆ. ಸಾಹಿತ್ಯ ಅಮರ ಎಂಬುದೂ ನಿಷ್ಠೆಯಾಗಿ ನಿಂತು ಮಾರ್ಗದರ್ಶಿಯಾಗುತ್ತದೆ.

❖ ❖ ❖

(3) ಡಾ॥ ಶಂ. ಬಾ. ಜೋಶಿಯವರ ದೃಷ್ಟಿಯಲ್ಲಿ ಕೆಲವು ಗ್ರಾಮದೇವತೆಗಳು*

ಸಾಹಿತ್ಯವು ಸರ್ವವನ್ನು ತೋರಿಸುವ ಕಾಲಚಕ್ರದ ಬಹು ದೊಡ್ಡ ದಾಖಲೆ ಎಂಬುದಾಗಿ ಡಾ॥ ಶಂ. ಬಾ. ಅವರು ಭಾಷೆ ಮತ್ತು ಸಾಹಿತ್ಯದ ಆಧಾರಗಳಿಂದ ತಿಳಿಸುತ್ತಿದ್ದಾರೆ. ಸೃಷ್ಟಿ ವಿಕಾಸವಾದದಲ್ಲಿ ಅಮೀಭಾ-ಮಂಗ-ಮಾನವ ಜೀವಿಗಳ ವಿಕಾಸ ಪ್ರಾದುರ್ಭಾವವಾಗಿ ಪರಿಣಮಿಸಿದ್ದು ನಮ್ಮೆದುರಿಗೆ ಇದೆ. ಈ ಎದುರಿಗಿರುವ ಜೀವಿಗಳ ಹಾಗೂ ದೇಹಗಳ ವಿಕಾಸವನ್ನು ತಿಳಿಯುವುದು ಮುಖ್ಯವಾದ ಕರ್ತವ್ಯ. ಈ ವಿಕಾಸವಾದದಲ್ಲಿ ದೇವತ್ವದ ಕಲ್ಪನೆಯೂ ಅಷ್ಟೇ ಮುಖ್ಯ. Evolution of Man ಮತ್ತು Cosmic cycle ಹೇಗೆ ಹೇಗೆ ನಡೆದವು ಎಂಬುದು ಸಾರ್ವತ್ರಿಕವಾಗಿ ಚರ್ಚೆಗೆ ಬಂದಿಲ್ಲ. ಪ್ರಂಪಚದಲ್ಲಿ ಸಾರ್ವತ್ರಿಕವಾದ ಒಪ್ಪಿಗೆಯಾಗಿಲ್ಲ. ಅಲ್ಲಲ್ಲಿ ಅಭ್ಯಾಸ ನಡೆದಿದೆ ಎಂಬುದು ಡಾ॥ ಶಂ. ಬಾ. ಅವರ Emergence (ಪ್ರಾದುರ್ಭಾವ) ಸಂಶೋಧನೆಯಿಂದ ತಿಳಿಯುತ್ತದೆ.

ಭಾರತದಲ್ಲಿ ಅತಿ ಪ್ರಾಚೀನವಾಗಿ ಧರ್ಮ, ಮತ, ಪಂಥಗಳ ಮಾರ್ಗವು ಮೂಡಿ ಬರುವ ಪೂರ್ವದಲ್ಲಿಯೇ ಹಟ್ಟಿ-ಹಾಡಿಗಳು ಹುಟ್ಟಿಕೊಂಡು ಆ ಹಟ್ಟಿ-ಹಾಡಿಗಳೇ ಬೆಳೆದಂತೆ ಮುಖ್ಯಸ್ಥರು ಗೊತ್ತಾಗಿ ತಮ್ಮದೇ ಆದ ಒಂದು ದೇವತ್ವದ ಕಲ್ಪನೆಯನ್ನು ತಂದುಕೊಂಡದ್ದುಂಟು. ಜನರ ಬೆಳವಣಿಗೆ ಅವಶ್ಯಕತೆಗಳ ಕೂಡುವಿಕೆಯಿಂದ 'ಊರು'ಗಳು ನಿರ್ಮಾಣವಾಗಿ ಕಾಲಕ್ರಮೇಣ ಊರುಗಳು ಬೆಳೆದು ಪಟ್ಟಣಗಳಾದುದು ಸರ್ವವಿದಿತ.

ನಾವು ಅರ್ಥರು; ಅಂದರೆ ಅವಶ್ಯಕತೆಯುಳ್ಳವರು. ಮನುಷ್ಯರು ಅವಶ್ಯಕತೆಗಳ ಕೈಗೂಸುಗಳಾಗಿದ್ದಾರೆ.

ಅವಶ್ಯಕತೆ ಎಂದಾಗ ವಿಕಾಸವಾದದ ಕಲ್ಪನೆಯತ್ತ ನೋಡಬೇಕು. ಮಂಗನಿಂದ ಮಾನವನವರೆಗೆ ಬೆಳೆದ ವಿಕಾಸವಾದ ಹೇಳುವಾಗ Natural Selection ಅಥವಾ Survival of the fittest ಎಂಬುದನ್ನು ಡಾರ್ವಿನ್ ಹೇಳುತ್ತಾನೆ. ಆದರೆ, ಡಾರ್ವಿನ್ನನ ಸಮಕಾಲೀನವಾದ ವ್ಯಾಲೇಸನು ಡಾರ್ವಿನ್ನನ ನಿರ್ಣಯ ಸದೋಷವಿದೆ ಮತ್ತು ಅವನ ಸ್ಪಷ್ಟೀಕರಣ ಅಸಮಂಜಸವಿದೆ ಎಂದು ಆಗಲೇ ತನ್ನ ಮಾತನ್ನು ಸ್ಪಷ್ಟಪಡಿಸಿದ. ಆದರೆ ಈ ಅಭಿಪ್ರಾಯ (ಆಕ್ಷೇಪ) ಆಗ ಜೀವಶಾಸ್ತ್ರಜ್ಞರಿಗೆ ಮಾನ್ಯವಾಗಿರಲಿಲ್ಲ!

---

* ಈ ಲೇಖನ ಬರೆಯುವಲ್ಲಿ ನಾನು ಡಾ॥ ಶಂ. ಬಾ. ಜೋಶಿಯವರ ಜೊತೆ ಮಾತನಾಡಿ ಕೆಲವು ಅಂಶಗಳನ್ನು ಸ್ಪಷ್ಟಮಾಡಿಕೊಂಡಿದ್ದೇನೆ–ಅಧ್ಯಯನ, ಶಂ. ಬಾ. ಸಂಭಾವನಾ ಗ್ರಂಥ.

ಡಾರ್ವಿನ್ನನ ಶೋಧವಾದ ಬಳಿಕ ಈ ಕ್ಷೇತ್ರದಲ್ಲಿ ನಡೆದ ಸಂಶೋಧನೆಯಲ್ಲಿ ಆದ ಪ್ರಗತಿಯಿಂದಾಗಿ ಡಾರ್ವಿನ್ನನ ಸಮೀಕರಣದ ಅಸಮರ್ಪಕತೆ ಬಯಲಿಗೆ ಬರತೊಡಗಿತು.

Natural Selection ಅಂದರೆ ನಿಸರ್ಗವೇ ತಕ್ಕದ್ದನ್ನು ಉಳಿಸಿಕೊಳ್ಳುತ್ತದೆ, ಅಂದರೆ ಹೋರಾಟವೇ ಈ ಪ್ರಗತಿಗೆ ಕಾರಣ ಎಂಬಲ್ಲಿ ಅಂತರ್ವಿಸಂಗತಿ ಇದೆ. ಹೋರಾಟವು ಸ್ಥಾಯೀಭಾವವಾಗುವುದಾದರೆ ವಿಕಾಸ ಅಶಕ್ಯ ಮತ್ತು ಮಾನವನೊಳಗಿನ ಮನಸ್ಸು ಎಂಬುದು ನಿಸರ್ಗದಲ್ಲಿ ಆಯ್ಕೆಗೆ ಎಲ್ಲಿಯೂ ಕಾಣಿಸುವುದಿಲ್ಲ. ವಾನರರಿಗೆ ಮನಸ್ಸು ಇಲ್ಲ. ಅರಿವು ಇದೆ. ಆದಕಾರಣ ಈ ಮನಸ್ಸು ಹೇಗೆ ಬಂತು ಎಂಬುದನ್ನು ವಿವರಿಸದೇ ಇರುವುದರಿಂದ ಡಾರ್ವಿನ್ನನ ವಿಕಾಸವಾದ ಅರ್ಥವಿಹೀನ.

ಈ ಮನಸ್ಸನ್ನು ಪ್ರೇರೇಪಿಸುವ ದಿವ್ಯ ವಿಶ್ವಶಕ್ತಿ (Spiritual Power) ಇರಬೇಕು ಎಂದು ವ್ಯಾಲೇಸನ ಅಭಿಪ್ರಾಯವಿತ್ತು. ಆದರೆ ಅದು ಜೀವಶಾಸ್ತ್ರಜ್ಞರಿಗೆ ಹಿಡಿಸುವುದು ಶಕ್ಯವಿರಲಿಲ್ಲ! ಕಳೆದ ನೂರು ವರ್ಷಗಳಲ್ಲಿ ಈ ಶಾಸ್ತ್ರದಲ್ಲಿ ತುಂಬ ಪ್ರಗತಿಯಾಗಿದೆ.

ಕ್ರೋಬರ್ ಮಾನವ ಶಾಸ್ತ್ರಜ್ಞರು (1917) ಸಂಸ್ಕೃತಿಯ ಪ್ರೇರಣಾ ಕೇಂದ್ರವು ಮಾನವನ ಇಂದ್ರಿಯ ಪಾತಳಿಗಳ ಆಚೆಗೆ ಇರಬೇಕು (super-organic level) ಎಂದು ಹೇಳಿದ ಮಾತು ಜೂಲಿಯಸ್ ಹಕ್ಸ್ಲೆಯಂತಹ ಜೀವಶಾಸ್ತ್ರಜ್ಞ(biologist)ನಿಗೂ ಹಿಡಿಸಿತು. ಜೂಲಿಯಸ್ ಹಕ್ಸ್ಲೆ ಮಾನವ ಜೀವದ ಅರ್ಥವು ಪ್ರಾಣಪಾತಳಿಯ ಮೇಲಿಂದ ಆಗುವುದಿಲ್ಲ ಎಂಬ ನಿಷ್ಕರ್ಷಕ್ಕೆ ಬಂದ. ಮಾನವ ಜೀವನದಲ್ಲಿ ಕಾಣಿಸಿಕೊಳ್ಳುವ ಭಾಷೆ, ಸಂಸ್ಕೃತಿ, ಕಲಾ, ಸಾಹಿತ್ಯ ಇವೆಲ್ಲವುಗಳ ಪ್ರೇರಣಾ ಕೇಂದ್ರವು ರೇತ, ರಕ್ತದ ಪಾತಳಿಯಲ್ಲಿಲ್ಲ. ಈ ಪ್ರಾಣಪಾತಳಿಯ ಆಚೆಗೆ ಒಂದು ಪಾತಳಿ ಇರಬೇಕು ಎಂಬ ನಿಷ್ಕರ್ಷ ಅವನದು. ಇದನ್ನು Noosphere ಎಂದು ಹೆಸರಿಸಿದ್ದಾನೆ. ಈ Noosphere ಎಂಬ ಹೆಸರು ಗ್ರೀಕ್ ಪುರಾತನ ಸಂಸ್ಕೃತಿಯೊಳಗಿನ nous ಇದರಿಂದ ಕಲ್ಪಿಸಿಕೊಂಡಿದ್ದಾರೆ. ಭಾರತೀಯ ಪುರಾಣ ಸಂಪ್ರದಾಯದೊಳಗಿನ ಪರಿಭಾಷೆಯಲ್ಲಿ ಹೇಳುವುದಾದರೆ ಪ್ರಾಣಪಾತಳಿಯ ಮೇಲ್ಗಡೆಗೆ ಆಕಾಶ ತತ್ವದ ಸ್ವರ್ ಪಾತಳಿಯುಂಟು. ಪ್ರಜ್ಞಾಪ್ರಕಾಶದ ಪಾತಳಿಯೇ ಇದು.

ಈ ಪಾತಳಿಯ ಮೇಲಿನ ಪ್ರೇರಣೆಯಿಂದ ಕೆಲಸ ಮಾಡುವ ಶಕ್ತಿಯು ಮಾನವನಲ್ಲಿ ಉಂಟು. ಈ ಅರ್ಥದಿಂದಲೇ ಮನುವು ಮನುಜರ ತಂದೆ ಎಂದು ಪುರಾತನರು ಬಗೆದಿದ್ದರು ಮತ್ತು ಪ್ರಾಣಪಾತಳಿಯ (ಪ್ರಾಣಲಿಂಗ) ಮೇಲಿನ ಪ್ರೇರಣೆಯಿಂದ ಬದುಕುವವರು ನರರು ಎಂಬ ಈ ಪರಿಭಾಷೆ ವೇದದಷ್ಟು ಪ್ರಾಚೀನವಿದೆ. ವಾನರ→ನರ, ನರರ ಜೀವನ ರೀತಿಯಲ್ಲಿ ವಿಕಾಸ ತತ್ವದಿಂದ ಪ್ರಜ್ಞೆ ಉದಯವಾಗುತ್ತದೆ, ಮಾನವನು ಕಾಣಿಸಿಕೊಳ್ಳುತ್ತಾನೆ. ಈ ಹಿನ್ನೆಲೆಯಲ್ಲಿ ವ್ಯಾಲೇಸನು ಹೇಳುವಂತೆ ವಾನರರಿಂದ ಮಾನವನಾದ ಎಂಬ ಡಾರ್ವಿನ್ನನ ಸಿದ್ಧಾಂತ ಅಸಮರ್ಪಕ ಎಂಬುದು

ಬಯಲಿಗೆ ಬರುತ್ತದೆ. ಏಕೆಂದರೆ, 'ವಾನರ' ಎಂಬ ಈ ಪರಿಭಾಷೆಯನ್ನು ನರನ ಮಾನದಂಡದಿಂದ ಕಲ್ಪಿಸಿಕೊಳ್ಳಲಾಗಿದೆ. ಆದ್ದರಿಂದ ಈ ನರನು ವಾನರ ಜೀವನ ರೀತಿಗೆ ಹತ್ತಿರದವನು ಎಂಬ ಅರ್ಥ ತಾನೇ ಆಗುತ್ತದೆ. ಆದರೆ ವಾನರ ಈ ಪಾರಿಭಾಷಿಕ ಪದ ವೇದದಲ್ಲಿ ಇದೆ. ವಾನರ ಅನ್ನುವ ಅರ್ಥದಲ್ಲಿ 'ಮರುತರು' ಇದ್ದಾರೆ. ಮತ್ತು 'ಕಪಿ' ಎಂಬ ಮಾತು ವೇದದಲ್ಲಿ ಇದೆ. 'ಕಪಿ' ಎಂಬ ಮಾತಿಗೆ 'ಲಿಂಗ' ಎಂಬ ಅರ್ಥವು ಅಲ್ಲಿ ಕಾಣುತ್ತದೆ. ಏಕೆಂದರೆ 'ಇಂದ್ರಾಣಿ' ಎಂಬ ಸ್ತ್ರೀ ಪಾತ್ರದೊಡನೆ ಈ 'ವೃಷಾಕಪಿ' ಭೋಗವನ್ನು ನಡೆಯಿಸಿದ ವರ್ಣನೆ ಇದೆ.

ಮರುತರನ್ನು ವರ್ಣಿಸುವಾಗ ಇವರನ್ನು ನರ ಎನ್ನಲಾಗಿದೆ. ಅಲ್ಲದೆ ಇವರನ್ನು ಕಬಂಧ (ಕಬಂಧ ಎಂದರೆ ಕೊಳಾಯಿ [ನಳ]), ಎಂದರೆ, ಜಲಸೇಚನ ಸಮರ್ಥರು ಎಂದು ವರ್ಣನೆ ಇದೆ. ಈ ಮರ್ತರನ್ನು ಅಹಿಭಾನವಃ ಎಂದು ವಿಶೇಷಿಸಿ ಹೇಳಲಾಗಿದೆ.

ನರ ಸಂಪ್ರದಾಯದವರ ಪೂಜೆಯಲ್ಲಿ ಪ್ರಾಣದೇವರು ಅಥವಾ ಮುಖ್ಯಪ್ರಾಣ ಹೆಸರಿನಲ್ಲಿ ವಾನರನು ಪೂಜೆಗೊಳ್ಳುತ್ತಿದ್ದಾನೆ.

ಈ ವಿಕಾಸ ತತ್ವದ ಅನುಕ್ರಮದಲ್ಲಿ ವಾನರ ಹಂತದವರು ಈ ವಾನರ ದೇವರನ್ನು ಪೂಜಿಸುವ ಒಂದು ನರಸಂಪ್ರದಾಯವು ಇತ್ತು. ಈ ಸಂಪ್ರದಾಯವು ನರನ ಮೋಕ್ಷ ಮಾರ್ಗದ ಬಗೆಗೆ ಸಾಧನ ಅನುಷ್ಠಾನಗಳನ್ನು ಕಂಡುಹಿಡಿದು ಜಗತ್ತಿನಲ್ಲಿ ನಾನಾ ಹೆಸರಿನಿಂದ ಪ್ರಚಾರದಲ್ಲಿದೆ ಮತ್ತು ವೃಕ್ಷಪೂಜೆ ನಾಗಪೂಜೆಯಲ್ಲಿ ವ್ಯಕ್ತಾವ್ಯಕ್ತ ಉಂಟೇ ಉಂಟು. ಇವೆಲ್ಲವೂ ಚಾಂದ್ರಸಂಪ್ರದಾಯಗಳು. ಈ ಮಾತು ಇನ್ನೊಂದರಿಂದ ದೃಢಪಡುತ್ತದೆ. ಈ ಸಂಪ್ರದಾಯಗಳಲ್ಲಿ ನಿಜವಾದ ನಾಳೆ ಎಂಬ ಆಗಾಮಿಯು ನಾಳೆಯತ್ತ, ಭವಿಷ್ಯದತ್ತ ಮುನ್ನಡೆಯಲು ಒತ್ತಾಯಪಡಿಸುತ್ತದೆ. ನಾಳೆಯ ಅರಿವು ಇಂದಿನ ಜೀವನವನ್ನು ರೂಪಿಸಲು ಹುಟ್ಟುತ್ತವೆ. ಆದರೆ ಈ ನರಸಂಪ್ರದಾಯದಲ್ಲಿ ನಾಳೆಯು ಇಲ್ಲದ್ದರಿಂದ ಇವರು ನಿನ್ನೆ ಇಂದುಗಳಲ್ಲಿ ಸುತ್ತಾಡಬೇಕಾಗುತ್ತದೆ. ಈ ಭೇದ ಇಂದಿಗೂ ಉಳಿದುಬಂದಿದೆ. ಆದಕಾರಣ ವಾನರ ಹಂತದ ತರುವಾಯ ಮಾನವನ ವಿಕಾಸವಾಗುವುದಕ್ಕಿಂತ ಮುಂಚೆ ನಡುವಿನ ಒಂದು ಘಟ್ಟ ಇರಬೇಕು ಎಂಬುದು ವ್ಯಾಲೇಸನಿಗೆ ಉಂಟಾದ ಸಂದೇಹ. Missing Linkದ ಈ ವಿಚಾರ ವಾಸ್ತವವಿದೆ ಎಂದು ಭಾರತೀಯ ಪುರಾತನ ಪರಿಭಾಷೆಯಿಂದ ಸಿದ್ಧವಾಗುತ್ತದೆ. ಜನತೆಯ ಬದುಕಿನಲ್ಲಿ ಪ್ರಾಣಪಾತಳಿ (ಚಿತ್ತ-ಪಾತಳಿ) ಮತ್ತು ಪ್ರಜ್ಞಾಪಾತಳಿ (ಪ್ರಕಾಶ ಪಾತಳಿ)ಗಳ ಮೇಲೆ ಗ್ರಾಮದೇವತೆಗಳು ರಚನೆಗೊಂಡಿವೆ. ಪ್ರಾಣಪಾತಳಿ ಮತ್ತು ಪ್ರಜ್ಞಾಪಾತಳಿಗಳಲ್ಲಿ ದೇವತ್ವದ ಕಲ್ಪನೆಗಳನ್ನು ಡಾ।। ಶಂ. ಬಾ. ಜೋಶಿ ಅವರು ಶೋಧಿಸಿ ತೋರಿಸುತ್ತಾರೆ. ನರಧರ್ಮವೇ ಪ್ರಾಣಪಾತಳಿ ಮತ್ತು ಮನುಜ ಧರ್ಮವೇ ಪ್ರಜ್ಞಾಪಾತಳಿ ಎಂದು ಗೊತ್ತುಮಾಡುತ್ತಾರೆ.

ವೇದದಲ್ಲಿ 'ಕಮಲ'ವಿದೆ. ಕಮಲಕ್ಕೆ ಪುಷ್ಕರ ಎಂಬ ಹೆಸರುಂಟು. ವೇದದ ಪ್ರಜ್ಞಾಪಾತಳಿಯ ಪ್ರಾರಂಭದಲ್ಲಿಯೇ ಪುಷ್ಕರಣಿ ಮತ್ತು ದೀಪಸ್ತಂಭಗಳೇ ನಿಜವಾದ

ದೇವರುಗಳೆಂದಿದೆ. ಪುಷ್ಕರ(ಣಿ) ಅಥವಾ ದೇವರು ಇರುವ ಜಾಗೆಗೆ ಗರ್ಭಗುಡಿ ಎಂದು ಹೆಸರು. ಗರ್ಭಗುಡಿಯ ಎದುರಿನಲ್ಲಿಯೇ ನೇರವಾಗಿ ದೀಪಸ್ತಂಭವಿರುತ್ತದೆ. ಗರ್ಭಗುಡಿ (ಗುಹೆ) ಮತ್ತು ಸ್ತಂಭ ನಿಜಕ್ಕೂ ಲಿಂಗಸಂಕೇತವಾಗಿದ್ದರೂ ದೇವರ ಗುಡಿಯ ಮುಂದೆ ಜ್ಯೋತಿ ಹೆಚ್ಚುವ ಸ್ತಂಭವೆಂದು ಹೇಳಲಾಗುತ್ತಿದೆ. ಬರುಬರುತ್ತಾ ಜ್ಯೋತಿ ಸ್ತಂಭಕ್ಕೆ ಬೇರೊಂದು ರೂಪಕೊಟ್ಟು ಜ್ಯೋತಿರ್ಲಿಂಗ ಎಂದು ತಿಳಿಸುವುದು ಶುರುವಾಯಿತು. ಕ್ರೈಸ್ತರ Candle Light ಇದನ್ನೇ ಹೋಲುವುದು. ಇವೆಲ್ಲವನ್ನು ಭಾಷೆ ಸ್ಪಷ್ಟವಾಗಿ ತಿಳಿಸುತ್ತದೆ. Language is a part of history ಎಂಬುದನ್ನು ಡಾ॥ ಶಂ.ಬಾ. ಜೋಶಿ ಎತ್ತಿ ಹೇಳುತ್ತಾರೆ.

ಮನುಷ್ಯರ ವಾಸ ಮೂಲತಃ ಅರಣ್ಯದಲ್ಲಿಯೇ ಪ್ರಾರಂಭವಾಯಿತು. ವನದ ಅಮ್ಮನೊಬ್ಬಳು ('ಶಕ್ತಿ') ಇದ್ದಾಳೆ ಎಂಬುದು ಅವರಿಗೆ ತಿಳಿದಂತಾಯಿತು. ಆಕೆಗೆ ವನದಮ್ಮ (ಬನದಮ್ಮ) ಎಂಬ ಹೆಸರು ಪ್ರಾರಂಭವಾಯಿತು. ವನದಮ್ಮನನ್ನು ನೋಡಿದವರು ಗುಡ್ಡದಲ್ಲಿ ತಾವಿರುವುದರಿಂದ ಇನ್ನೊಂದು ಕಡೆಗೆ ಗುಡ್ಡದಮ್ಮ (ಗುಡದಮ್ಮ) ಎಂಬಂತಹ ಹೆಸರುಗಳನ್ನು ಕರೆಯದೇ ಇರಲಾರರು. ಪ್ರಾಣಪಾತಳಿಯಲ್ಲಿನ ವನ ಹಾಗೂ ಗುಡ್ಡಗಳು ತೋರಿಬಂದು ಪ್ರಜ್ಞಾಪಾತಳಿಯಲ್ಲಿ ಶಕ್ತಿಯ ಕಲ್ಪನೆ ಬಂದಿರುವುದು ಸಹಜವಿದೆ. ಬರುಬರುತ್ತಾ ಈ ಪ್ರಜ್ಞಾಪಾತಳಿಯ ದೃಷ್ಟಿ ಕ್ಷಿತಿಜ ತೋರುತ್ತ ನಡೆದಂತೆ ಶಕ್ತಿಯೇ ಒಂದು ರೂಪ ಎಂಬುದು ತಿಳಿದು ಶಂಕರಿ - (ವನ) ಬನಶಂಕರಿ ತೋರುತ್ತಾಳೆ. ಪ್ರಜ್ಞಾಪಾತಳಿಯಲ್ಲಿ ಶಕ್ತಿ ಅವ್ಯಕ್ತವಾಗಿ ಅವತಾರದ ಕಲ್ಪನೆಯನ್ನು ತರುತ್ತದೆ. 'ಬನಶಂಕರಿ' ಎಂಬುದು ಮೊದಲಿನ ಅವತಾರ. ಚೌಡೇಶ್ವರಿಯು ಅದರ ಮುಂದಿನದಾಗಿರಬೇಕು. ಚಾಮುಂಡಿ ಎಂಬುದು ಚೌಡೇಶ್ವರಿಯ ಸಂಸ್ಕೃತ ರೂಪ. 'ಚಾಮುಂಡಿ' ಎಂಬುದಕ್ಕೆ ಹೇಳುವ ಅರ್ಥಕ್ಕಿಂತಲೂ ಚೌಡೇಶ್ವರಿ ಎಂಬ ಶಬ್ದಕ್ಕೆ ಆಗುವ ಅರ್ಥವು ಬಹಳ ಮಹತ್ವದ ಐತಿಹ್ಯವನ್ನು ಬೆಳಕಿಗೆ ತರುತ್ತದೆ.[1]

(ಶಕ್ತಿಯ) ದೇವಿಯ ಕಲ್ಪನೆ ಮಾಡುವಾಗ ಶಬ್ದಗಳು ಚಿತ್ತದಿಂದ ಹೊರಟು ಪ್ರಜ್ಞೆಯನ್ನು ಮುಟ್ಟಿದಾಗ, ಅದೇ ಶಕ್ತಿ, ಶಬ್ದ, ಭಾವ, ಮನಸ್ಸುಗಳಿಂದ ಕಾಲಗತಿಯಿಂದ ಬೇರೆಯಾಗದೇ ಇರಲಾರವು. 'ಚೋಳರ ಕಾಲದ ಪಿಡಾರಿ (ಭಟ್ಟಾರಿಕಾ-ಮಹಿಷಮರ್ದಿನಿ) ವಿಗ್ರಹಗಳು ನಂದಿ, ಕೋಲಾರ ಮುಂತಾದ ಸ್ಥಳಗಳಲ್ಲಿ ಸಿಕ್ಕಿರುವುವು. ಹೊಯ್ಸಳರ ಚಾಲುಕ್ಯ ಚೋಳ ಸಂಪರ್ಕದಿಂದ ಮಹಿಷಮರ್ದಿನೀ ವಿಗ್ರಹಗಳನ್ನು ವಿಶೇಷವಾಗಿ ತಮ್ಮ ದೇವಾಲಯಗಳಲ್ಲಿ ಸ್ಥಾಪಿಸಿದರು. ಚೌಡೇಶ್ವರ, ಚೌಡಿ, ಚಾಮುಂಡಿ, ಎಂಬ ಹೆಸರುಗಳು ೯ ನೆಯ ಶತಮಾನದಿಂದ ಸಾಮಾನ್ಯವಾಗಿ ಬಳಕೆಯಲ್ಲಿ ಬಂದವು.'[2]

ಗ್ರಾಮ ದೇವತೆಗಳ ಕಲ್ಪನೆ ಪ್ರಜ್ಞಾಪಾತಳಿಯಿಂದ ನಿರ್ಮಾಣವಾಗುವುದಕ್ಕೆ ಅನೇಕ ಉದಾಹರಣೆಗಳುಂಟು. 'ಚೌಡೇಶ್ವರಿಯು ಚೂಡದ ಈಶ್ವರಿ. (ಚೂಡಾ=ಕೂದಲು).

---

1 ಶಂ. ಬಾ. ಜೋಶಿ : ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಭಾಗ-೨, ಪು. ೨೩.

2 ಎಸ್. ಶ್ರೀಕಂಠಶಾಸ್ತ್ರೀ : ಸಂಶೋಧನ ಲೇಖನಗಳು, ಪು. ೪೫೫.

ಚೂಡಾ ಎಂದರೆ ಕಂಕಣ (ಬಳೆ), ಗಾಜಿನ ಕಂಕಣಗಳು ಗೊತ್ತಾಗುವ ಮೊದಲು ಕೂದಲಿನ (ಚೂಡಾ) ಕಂಕಣವಿರಬೇಕೆಂದು ಊಹಿಸಬಹುದಾಗಿದೆ. ಎಂದರೆ ಮೊಟ್ಟಮೊದಲಿಗೆ ಉಣ್ಣೆಯ ಕಂಕಣವೇ ಎಲ್ಲರಲ್ಲಿ ಇದ್ದಿತೆಂದು ವ್ಯಕ್ತವಾಗುತ್ತದೆ. ಚೌಡೇಶ್ವರಿಯು ಕೂದಲು ಕಂಕಣದ ಅಧಿದೇವತೆ. ಆದುದರಿಂದಲೇ ಭಾಗ್ಯದೇವತೆ, ಸೌಭಾಗ್ಯದಾಯಕವಾದ ಪರಮೇಶ್ವರಿಯು.'[3]

ಡಾ. ಶಂ. ಬಾ. ಅವರ ಈ ಸಂಶೋಧನೆಯು ಈಗಲೂ ಸತ್ಯ. ಉತ್ತರ ಕರ್ನಾಟಕದ (ಕುರುಂಬ) ಕುರುಬ ಜನಾಂಗದವರು ಹುಟ್ಟಿದ ಮಗುವಿಗೆ ಕುರಿಉಣ್ಣೆ (ಕರಿಉಣ್ಣೆ)ಯಿಂದ ಕಂಕಣ ಮಾಡಿ ಹೆಸರಿಟ್ಟ ಮರುದಿನ ಎರಡೂ ಕೈಗಳಿಗೆ ಈಗಲೂ ತೊಡಿಸುವ ನಿಯಮವಿದೆ. ಕೆಲವರು ದೇವಿಯ ಕಂಕಣವೆಂದೂ, ಚೌಡಿಯ ಕಂಕಣವೆಂದೂ ಹೆಸರಿಸುತ್ತಾರೆ. ಕೆಲವು ಅರಸರು ಕರ್ನಾಟಕದಲ್ಲಿ ಈ ಕಂಕಣ ಹಾಗೂ ಹೆಸರುಗಳನ್ನು ಹೊಂದಿದ್ದರು. 'ಗಂಗ ರಾಷ್ಟ್ರಕೂಟರ ಕಾಲದಲ್ಲಿ ಪ್ರಸಿದ್ಧವಾದ ಚಾವುಂಡರಾಯನು ಜೈನನು. ಆದುದರಿಂದ ಚಾಮುಂಡಿಗೂ ವಾಸಂತಿಕಾದೇವಿಗೂ ಸಾದೃಶ್ಯವೋ, ಅಭೇದವೋ ಇದ್ದತೆಂದು ಊಹಿಸಬಹುದು. ಜೈನತೀರ್ಥಂಕರರಲ್ಲಿ ಕೆಲವರಿಗೆ ಚಾಮುಂಡಿ ಸದೃಶರಾದ ಯಕ್ಷಿಣಿಯರಿದ್ದರು.[4] ಇದೇ ರೀತಿ ಕರ್ನಾಟಕದಲ್ಲಿ ಬೇರೆ ಬೇರೆ ಜನಾಂಗದವರೂ ಶಕ್ತಿಯನ್ನು ತಮ್ಮ ಪ್ರಜ್ಞೆಗೆ ಅನುಸರಿಸಿ ಗೊತ್ತುಮಾಡಿಕೊಂಡು ಹೆಸರಿಸಿದ್ದುಂಟು.

'ಜಾಡರ ಕುಲವರ್ಧಿನಿಯು ಶಾಕಂಬರಿ, ಶಾಕಾಂಬರಿ, ಬನಶಂಕರಿ. ಎಷ್ಟು ಔಚಿತ್ಯವಿದೆ ಈ ಹೆಸರಿನಲ್ಲಿ! ಮರದಮ್ಮ, ಬನಶಂಕರಿ ಎಂದೂ ನಮ್ಮ ಈ ಜನಾಂಗವು ಆರಾಧಿಸುವವಳನ್ನೇ ಮರಾಠಿ ದೇಶದ ಹಟಗಾರ-ದನಗಾರ (ಧನಗರ)ರು ಬನಾಯಿ-ಬನದ ಆಯಿ ಎಂಬ ಹೆಸರಿನಲ್ಲಿ ಪೂಜಿಸುವರು!'[5]

ಕರ್ನಾಟಕದಲ್ಲೂ ಮಹಾರಾಷ್ಟ್ರದಲ್ಲೂ ವಾಸವಾಗಿರುವ ವೃತ್ತಿಗಾಯಕರೂ ಕಲಾಕಾರರೂ ಆದ ಗೊಂದಲಿಗರು ಗೊಂದಲವನ್ನು ಹಾಕುವಾಗ ಈ ಪ್ರಜ್ಞಾಪಾತಳಿಯನ್ನು ಶೃಂಗಾರದೆಡೆಗೆ ತಿರುಗಿಸುತ್ತಾರೆ. ದೇವಿಯ ಹೆಸರನ್ನೇ ಕಲಶಕ್ಕೆ ಇಡುತ್ತಾರೆ. 'ತುಂಬಿದ ತಾಮ್ರದ ಚರಿಗೆಯ ಬಾಯಲ್ಲಿ ಐದು ಎಲೆಯನ್ನು ಇಟ್ಟು, ಅಲ್ಲಿಯೇ ತೆಂಗಿನಕಾಯಿ ಮೇಲಿಟ್ಟು, ಅರಿಷಿಣ-ಕುಂಕುಮವಿಟ್ಟು ನತ್ತು ಇಡಿಸಿ ವಸ್ತ್ರ ವಡವೆಗಳನ್ನು ತೊಡಿಸುತ್ತಾರೆ. ಇದೇ ಕಲಶ. ಈ ಕಲಶದ ಸುತ್ತಮುತ್ತಲೂ ಕಬ್ಬು, ಬಾಳೆ, ತಳಿರು ತೋರಣ ಕಟ್ಟಿ ಬನವಾಗಿ ಶೃಂಗರಿಸುತ್ತಾರೆ. ಮುಂದೆ ದೀಪ (ಸಣ್ಣ ಹಿಲಾಲ)ಗಳನ್ನು ಹಚ್ಚುತ್ತಾರೆ. ಬೆಳ್ಳಂಬೆಳಗು ದೇವಿಯ ವಿವಿಧ ನಾಮಗಳನ್ನು ಹಾಡಿನೊಂದಿಗೆ ಸ್ಮರಿಸುತ್ತಾರೆ. ಇವರು

---

3 ಶಂ. ಬಾ. ಜೋಶಿ : ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಭಾಗ-೨, ಪು. ೨೩.

4 Burgess : Digambara Jaina Iconography.

5 Enthoven I; Tribes and castes of Bombay, PP. 310-311

ಸ್ಮರಿಸುವ ದೇವಿ (ಶಕ್ತಿ)ಯ ನಾಮಗಳೆಲ್ಲ ಈಗಿನ ಗ್ರಾಮದೇವತೆಗಳ ಹೆಸರುಗಳೇ ಆಗಿವೆ. ಅಂಬಾ, ಜಗದಂಬಾ, ಯಲ್ಲಮ್ಮ (ಎಲ್ಲರ+ಅಮ್ಮ), ಬನದಮ್ಮಾ, ಬನಶಂಕರಿ, ವನಶಂಕರಿ, ತುಳಜಾಭವಾನಿ, ಮಹಾಲಕ್ಷ್ಮಿ ಮುಂತಾದವುಗಳು, ಶಕ್ತಿದೇವತಾ ಸ್ವರೂಪಳಾದ ದುರ್ಗಾ, ಕಾಳೀ, ಕರಾಲೀ ಇತ್ಯಾದಿಗಳು ಯಜ್ಞೇಶ್ವರ ಸಂಬಂಧವಾದುವು. ತೈತ್ತಿರೀಯ ಸಂಹಿತೆಯಲ್ಲಿ ವೇದಿಯನ್ನು ಅದಿತಿ, ಸಿಂಹೀ, ಮಹಿಷೀ ಇತ್ಯಾದಿಯಾಗಿ ಸಂಬೋಧಿಸಿದೆ. ವೇದಿ ಅಥವಾ ಚಿತೆಯಲ್ಲಿ ಪ್ರತಿಷ್ಠಿತವಾದ ಅಗ್ನಿಯ ಪ್ರಚಣ್ಡರೂಪವು ದುರ್ಗಾ.'[6]

ಶಕ್ತಿಯ ನಾಮಗಳು ಅನೇಕ ಬಗೆಯಾಗಿ ಹರಿದರೂ ಮೂಲವಾಗಿ ಪ್ರಜ್ಞಾಪಾತಳಿ ಅದಿತಿ (ಆದಿಶಕ್ತಿ)ಗೆ ಬಂದಿತು. ಆದಿಶಕ್ತಿಯ ಕಲ್ಪನೆಯು ಎಲ್ಲ ಕಡೆಗೂ ಅದಿತಿ (ಎಲ್ಲಮ್ಮ) ಗೊಂಡು, ಪ್ರಜ್ಞಾಪಾತಳಿಯ ಹಂತಗಳನ್ನು ಗುರುತಿಸಬಹುದಾಯಿತು. 'ಗ್ರೀಸ ದೇಶದ ಎಲ್ಲಮ್ಮ (Mother of all gods and all men) ಪೂಜೆಯು ಕ್ರೈಸ್ತ ಧರ್ಮಕ್ಕಿಂತ ಮುಂಚೆ ಬಹಳೇ ಲೋಕ ಪ್ರಿಯವಾಗಿತ್ತು.'[7] ಭರತಖಂಡದಲ್ಲಿ ಕಾಣುವ ಶಕ್ತಿಯ ಪ್ರಜ್ಞಾಪಾತಳಿಯು ಬೇರೆ ಕಡೆಗೆ ಕಂಡುಬರಲು ಪರಂಪರೆಯ ಸಂಚಾರವೇ ಕಾರಣ. 'ಕೆಲವು ಸಂಶೋಧಕರ ಅಭಿಪ್ರಾಯದಂತೆ - ಈ ದೇವಿಯು ಏಷಿಯಾ ಮೈನರಿನಲ್ಲಿ ಮೊದಲು ಹುಟ್ಟಿದಳು. ಇದು ನಿಜವೆಂದು ಒಪ್ಪಿಕೊಂಡು ಕ್ರಿಸ್ತಪೂರ್ವ ೬ ನೆಯ ಶತಮಾನದ ಸುಮಾರಿಗೆ ಗ್ರೀಸದಲ್ಲಿ ನಡೆಯುತ್ತಿದ್ದ ಶಿವಶಕ್ತಿಯ ಪೂಜೆಯ ರೀತಿಯನ್ನು ನೋಡಿದರೆ ಈ ಪೂಜಾಪದ್ಧತಿಯಾದರೂ ಹಿಂದೂ ದೇಶದಿಂದಲೇ ಅಲ್ಲಿಗೆ ಹೋಗಿರಬೇಕೆಂದು ಹೇಳಬೇಕಾಗುತ್ತದೆ.'[8]

ಶಕ್ತಿಯ ಬಗೆಗಿನ ಪ್ರಜ್ಞಾಪಾತಳಿ ವಿವೇಚನೆ ಇನ್ನೂ ನಡೆಯುತ್ತಲೇ ಇದೆ. ಅದೇ ರೀತಿ ಶಕ್ತ (ಶಿವ)ನ ಬಗೆಗೂ ನಡೆದುದುಂಟು. ಅತೀ ಪ್ರಾಚೀನ ಕಾಲದಲ್ಲಿ ಪುರುಷ (ಶಕ್ತ) ಬಿರುಸಾದವನು ಎಂಬುದು ಚಿತ್ತಪಾತಳಿಗೆ ಹೊಳೆದಿರಲು ಸಾಕು. ಕಲ್ಲು ಮರಗಳೇ ಬಿರುಸಿನ ಸಂಕೇತಗಳಾಗಿವೆ. ಕಲ್ಲುಪೂಜೆ, ಲಿಂಗ, ನಾಗ ಅಥವಾ ನಾಗ-ಲಿಂಗ-ಪ್ರಜ್ಞಾಪಾತಳಿಗೆ ಬಂದು ಕಲ್ಲ-ಲಿಂಗ ಕಲ್ಲಿಂಗನೆಂದೂ, ಎಲ್ಲವೂ (ಕಲ್ಲುಗಳು ಲಿಂಗಮಯ) ಯಲ್ಲಿಂಗನೆಂದೂ ಕರೆದಿರಬೇಕು. ಯಲ್ಲಿಂಗನು ಸರ್ವರ ಲಿಂಗನಾಗ ಬಯಸುತ್ತಾನೆ (ಪ್ರಜ್ಞಾಪಾತಳಿಯಲ್ಲಿ). ಹೀಗೆ ಲಿಂಗಪೂಜೆ ಭಾರತದ ಮಹಾಕಾವ್ಯಗಳ ಪೂರ್ವದಲ್ಲಿಯೇ ಇತ್ತು. ಈ ಹೊತ್ತಿಗೂ ಕುರುಬ ಜನಾಂಗದವರು ಬೀರಪ್ಪನ ಗುಡಿಗಳಲ್ಲಿ ಗುಂಡು ಕಲ್ಲುಗಳನ್ನೇ ಪೂಜಿಸುತ್ತಾರೆ. ಆದರೆ ಉತ್ಸವ ಮೂರ್ತಿಯನ್ನು ರೂಪದ ಮೂರ್ತಿಯನ್ನಾಗಿ ಬೇರೆ ಬೇರೆ ಧಾತುಗಳಿಂದ ನಿರ್ಮಾಣಿಸಿ ತೋರಿಸುತ್ತಾರೆ. ಇವರಂತೆ ಅನೇಕ

---

6 ಎಸ್. ಶ್ರೀಕಂಠಶಾಸ್ತ್ರೀ : ಸಂಶೋಧನ ಲೇಖನಗಳು, ಪು. ೪೩೭.

7 Encyclopaedia Britannica ('Great Goddess').

8 ಕರ್ನಾಟಕ ಸಂಸ್ಕೃತಿಯ ಪೂರ್ವಪೀಠಿಕೆ, ಭಾಗ-೨, ಪು. ೬೮-೬೯.

ಜನಾಂಗದವರು ಈಗಲೂ ತೋರುತ್ತಾರೆ. ಬಿಳಿಗಿರಿರಂಗನ ಬೆಟ್ಟದ ಸೋಲಿಗರ ಕಲ್ಪನೆಯು ಸದ್ಯ ಕೇವಲ ಚಿತ್ತಪಾತಳಿಯಲ್ಲಿ ಇದೆ. ಕಲ್ಲು ಕಟ್ಟೆಗೆಯಿಂದಾಗಿ ಅವರ ದೇವರುಗಳ ಕಲ್ಪನೆ ಮೂಲದ ರೀತಿಗಳನ್ನು ಕಣ್ಣೆದುರಿಗೆ ತೆರೆದು ತೋರುವಂತಿದೆ.

ಜಗತ್ತಿನ ಯಾವುದೇ ಭಾಗದಲ್ಲಿ ದೇವರ ನಿರ್ಮಾಣದ ಬಗೆಗೆ ಅಭ್ಯಾಸ ನಡೆದರೂ ಎರಡು ದೃಷ್ಟಿಗಳಲ್ಲಿ ನಡೆಯಬೇಕು. ಅವು ಒಂದು ಚಿತ್ತಪಾತಳಿ, ಮತ್ತೊಂದು ಪ್ರಜ್ಞಾಪಾತಳಿ.

ನರನಲ್ಲಿ ನರಧರ್ಮ ಬೆಳೆದಾಗ ಚಿತ್ತದ ಬಗೆಗೆ ಸ್ಪಷ್ಟವಾದುದನ್ನು ಕಾಣಬಹುದು. ನರ ಮನುಜನಾದಾಗಿನ ಮನೋಧರ್ಮವನ್ನು ಪ್ರಜ್ಞಾಪಾತಳಿಯಲ್ಲಿ ಪ್ರಮುಖವಾಗಿ ಗುರುತಿಸಬಹುದು.

ಈ ಗುರುತು ದೇವತೆಗಳ ಕಲ್ಪನೆಗೆ ನರನಿದ್ದಾಗ ನರಧರ್ಮವಾಗಿ, ಮಾನವನಿದ್ದಾಗ ಮನೋಧರ್ಮ ತಾಳಿ ಹಾಗೇ ಪ್ರಕಾಶ ಪಾತಳಿಯೆಡೆಗೆ ಸಾಗಿ 'ದೇಹವೇ ದೇವಾಲಯ' ಎಂಬುದಾಗಿ ಕಂಡುಬಂದಿದೆ. ಗ್ರಾಮದೇವತೆಗಳಿಗೆ ಸಣ್ಣ ಗುಡಿಯಿದ್ದಾಗಲೂ, ಬನ (grove) ಕಳಶ ಕಟ್ಟುವಾಗಲೂ ಗರ್ಭಗುಡಿ ರೂಪ ತಾಳುವುದು ಮುಖ್ಯವೆನಿಸುತ್ತದೆ. ಈಗಲೂ ದೇವರು ಇರುವ ಜಾಗೆಗೆ ಗರ್ಭಗುಡಿ ಎನ್ನುತ್ತಾರೆ.

ಡಾ॥ ಶಂ. ಬಾ. ಜೋಶಿ ಅವರು ಜಗತ್ತಿನ ನಿರ್ಮಾಣದ ಗತಿ-ಸ್ಥಿತಿಗಳ ಸಂಶೋಧಕರು. ಅವರು Evolution of man ಬಗೆಗೆ ವಿಜ್ಞಾನವನ್ನೂ ಸೋಸಿದ್ದಾರೆ. ಯಾವುದನ್ನೂ ಸಂಶೋಧಿಸದೆ ಒಪ್ಪರು. ಭಾಷೆ-ಸಂಸ್ಕೃತಿಯ ಆಳದಲ್ಲಿ ಮಾನವನ ವಿಕಾಸವನ್ನು ಕ್ರಮಬದ್ಧವಾಗಿ ಹುಡುಕಿದವರು. ಅವರ ಸಂಶೋಧನೆಯು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಿ, ವಿಚಾರ ಮಾಡಲಿಕ್ಕೆ ಜನರನ್ನು ತೊಡಗಿಸಿದೆ.

❖ ❖ ❖

ಶಂಬಾದತ್ತಿಯ ಮೂಲಕ
ಈವರೆಗೆ ಪ್ರಕಟವಾಗಿರುವ ಗ್ರಂಥಗಳು

1. ವೈವಸ್ವತ ಮನು - ಎಸ್. ಕೆ. ರಾಮಚಂದ್ರರಾವ್ 1985

2. ಸ್ವಾಯಂಭುವ ಮನು - ವೈವಸ್ವತಮನು
ತೌಲನಿಕ ಅಧ್ಯಯನ - ಮಲ್ಲೇಪುರಂ ಜಿ. ವೆಂಕಟೇಶ್ 1986

3. ಭಾರತ ಸಿಂಧುರಶ್ಮಿಯಲ್ಲಿ ಮನುಗಳ ಸಾಧನೆ (ಲೇಖನ)
- ಪ್ರೊ॥ ಆರ್. ಜಿ. ಕುಲಕರ್ಣಿ
(ದತ್ತಿ ಉಪನ್ಯಾಸಗಳು) 1989

4. ವೇದ ಪುರಾಣ ಮಹಾಕಾವ್ಯ (ಲೇಖನ)
- ಡಾ॥ ಶಂಕರಮೊಕಾಶಿ ಪುಣೇಕರ
(ಕಾವ್ಯ ಇತಿಹಾಸ) 1992

5. ಶಂಬಾ ಕೃತಿ ಸಮೀಕ್ಷೆ - ಮಲ್ಲೇಪುರಂ ಜಿ. ವೆಂಕಟೇಶ್ 1992

6. ಶಂಬಾ ಸಾಹಿತ್ಯದಲ್ಲಿ ಗ್ರಾಮದೇವತೆ
- ಡಾ॥ ನಿಂಗಣ್ಣ ಎನ್. ಸಣ್ಣಕ್ಕಿ 2001

ಡಾ: ಶಂಬಾ ಜೋಶಿ ಅವರು ಜಗತ್ತಿನ ನಿರ್ಮಾಣದ ಗತಿ-ಸ್ಥಿತಿಗಳ ಸಂಶೋಧಕರು. ಅವರು 'ಯವ್ಹೋಲೂಷನ್ ಆಫ್ ಮ್ಯಾನ್' ಬಗೆಗೆ ವಿಜ್ಞಾನವನ್ನೂ ಸೋಸಿದ್ದಾರೆ. ಯಾವುದನ್ನೂ ಸಂಶೋಧಿಸದೆ ಒಪ್ಪರು. ಭಾಷೆ - ಸಂಸ್ಕೃತಿಯ ಆಳದಲ್ಲಿ ಮಾನವನ ವಿಕಾಸವನ್ನು ಕ್ರಮಬದ್ಧವಾಗಿ ಹುಡುಕಿದವರು. ಅವರ ಸಂಶೋಧನೆಯು ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಿ, ವಿಚಾರ ಮಾಡಲಿಕ್ಕೆ ಜನರನ್ನು ತೊಡಗಿಸಿದೆ.

ಗ್ರಾಮದೇವತೆಗಳನ್ನು ಕುರಿತ ಅವರ ಸಾಹಿತ್ಯದ ಚಿಂತನೆಗಳ ವಿಶ್ಲೇಷಣೆ ಈ ಪುಸ್ತಕದ ವಿಶೇಷ.

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ